# ಶ್ರೀ ಶಾರದಾ

ಮಾಸಪತ್ರಿಕೆ – 15 ಸೆಪ್ಟೆಂಬರ್ 2012

ಬೆಲೆ ರೂ.

॥ ಧಿಯೋ ಯೋನಃ ಪ್ರಚೋದಯಾತ್ ॥

ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - ☎

ಸಂಪುಟ- ಸಂಚಿಕೆ- ಪುಟಗಳು-



**ಶಿಕ್ಷಣ-ಮಗುವಿನ ಹಕ್ಕು**
ವೈ. ಭುವನೇಂದ್ರ ರಾವ್
ಬಿ.ಟೆಕ್.ಎಡ್, ಎಂ.ಎ
ಪುಟ-4

**'ಚಾಟಿ - ಚಟಾಕಿ'**
ಮಾರ್ಪಳ್ಳಿ ಆರ್ ಮಂಜುನಾಥ್
ಪುಟ-4



**ವೇದಗಣಿತದ ಪರಿಚಯ-2**
ಸಿ.ಎಸ್.ರಾವ್
ಪುಟ-5


**ಪ್ರತಿಭಾನ್ವಿತ ಗಾಯಕಿ ಡಾ। ಸುಶೀಲ ವಿದ್ಯಾರಣ್ಯ**
**ಸೋಂಪಾ ಚಿತ್ರದ ಮೂಲಕ ಚಲನಚಿತ್ರ ಹಿನ್ನಲೆ ಗಾಯಕಿ**
ವರ್ಕಾಡಿ ನಾಗರಾಜ ರಾವ್
ಪುಟ-6


# ಗುರುಗಳಲ್ಲಿ ಭಕ್ತಿ ಹಾಗೂ ಭಗವಂತನಲ್ಲಿ ಶ್ರದ್ಧೆಯಿಂದ ಮನುಷ್ಯ ಜನ್ಮ ಪಾವನವಾಗುತ್ತದೆ

## -ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳು

ನನ್ನ ಅತ್ಯಂತ ಪ್ರೀತಿಯ ಶಿಷ್ಯರಾದ ಸ್ಥಾನಿಕ ಬ್ರಾಹ್ಮಣ ಸಮಾಜದವರು ಪ್ರತೀ ವರ್ಷವೂ ಚಾತುರ್ಮಾಸ್ಯ ಅನುಷ್ಠಾನ ಸಂದರ್ಭದಲ್ಲಿ ಗುರುಗಳ ದರ್ಶನಕ್ಕಾಗಿ ಅವರ ಆಶೀರ್ವಚನಕ್ಕಾಗಿ ಶೃಂಗೇರಿಗೆ, ಇಲ್ಲದಿದ್ದರೆ ಗುರುಗಳು ಎಲ್ಲಿ ಇರುತ್ತಾರೋ ಅಲ್ಲಿಗೆ ಬಂದು ಅವರಿಂದ ಅನುಗ್ರಹವನ್ನು ಪಡೆಯುತ್ತಿದ್ದಾರೆ. ಈ ಬಾರಿ ದೂರದ ಚೆನ್ನೈವರೆಗೆ ಎಲ್ಲರೂ ಒಗ್ಗಟ್ಟಾಗಿ ನಮ್ಮ ಅಪ್ಪಣೆಯಂತೆ ಇಲ್ಲಿ ಸೇರಿರುವುದು ನಮಗೆ ಅತೀವ ಆನಂದವನ್ನುಂಟುಮಾಡಿದೆ. ಸ್ಥಾನಿಕ ಬ್ರಾಹ್ಮಣ ಸಮಾಜಕ್ಕೆ ಗುರುಗಳ ಆಶೀರ್ವಾದ ಇದ್ದೇ ಇರುತ್ತದೆ. ಮನುಷ್ಯನು ಜನ್ಮಕ್ಕೆ ಬಂದ ಮೇಲೆ ಗುರುಗಳಲ್ಲಿ ಭಕ್ತಿ ಹಾಗೂ ಭಗವಂತನಲ್ಲಿ ನಂಬಿಕೆ ಇಡಬೇಕು. ಅದೇ ರೀತಿ ಸ್ಥಾನಿಕ ಬ್ರಾಹ್ಮಣ ಸಮಾಜದವರು ಅನಾದಿಕಾಲ ದಿಂದಲೂ ಶೃಂಗೇರಿ ಪೀಠದ ಮೇಲೆ ಭಕ್ತಿ, ಶ್ರದ್ಧೆಯಿಂದ ನಡೆದು ಕೊಳ್ಳುತ್ತಿದ್ದಾರೆ. ಇದರಿಂದ ಮನುಷ್ಯ ಜನ್ಮವು ಪಾವನವಾಗುತ್ತದೆ. ನೀವೆಲ್ಲರೂ ಒಗ್ಗಟ್ಟಿನಲ್ಲಿ ಇದೇ ರೀತಿ ಗುರುಗಳ ಸೇವೆಯನ್ನು ಸದಾ ನಡೆಸುವಂತಾಗಲಿ ಎಂದು ಆಗಮಿಸಿದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ, ಬೆಂಗಳೂರು, ಮೈಸೂರು, ಕಾಸರಗೋಡುಗಳಲ್ಲಿ ನೆಲೆಸಿರುವ ಎಲ್ಲಾ ಸ್ಥಾನಿಕ ಬ್ರಾಹ್ಮಣ ಸಮಾಜದವರನ್ನು ಫಲ ಮಂತ್ರಾಕ್ಷತೆ ಇತ್ತು ಆಶೀರ್ವಚಿಸಿದರು.

ತಾ.9-9-2012ನೇ ಆದಿತ್ಯವಾರ 'ಸುಧರ್ಮ', ಡಾ। ರಾಧಾಕೃಷ್ಣನ್ ರಸ್ತೆ, ಮೈಲಾಪುರ, ಚೆನ್ನೈ ಇಲ್ಲಿ ಗುರುಗಳ ಚಾತುರ್ಮಾಸ್ಯ ಭೇಟಿಗಾಗಿ ಅವಿಭಜಿತ ದಕ್ಷಿಣ ಕನ್ನಡ , ಕಾಸರಗೋಡು, ಬೆಂಗಳೂರು, ಮೈಸೂರು ಹಾಗೂ ಇತರ ಪ್ರದೇಶ ದಲ್ಲಿ ನೆಲೆಸಿರುವ ಎಲ್ಲಾ ಸಮಾಜ ಬಾಂಧವರು ತಮಿಳು ನಾಡಿನ ಚೆನ್ನೈಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು. ಧರ್ಮಾಧಿಕಾರಿ ಶ್ರೀ ಸತ್ಯಶಂಕರ ಬೊಳ್ಳಾವ ಇವರು ಗುರುಗಳ ಅನುಗ್ರಹ ಭಾಷಣದ ನಂತರ ಹೊರೆಕಾಣಿಕೆ ಹಾಗೂ ಸಮಷ್ಠಿ ಭಿಕ್ಷೆಯ ವಿವರಗಳನ್ನು ಆಯಾ ಸಂಘಗಳ ಹೆಸರುಗಳನ್ನು ಓದಿ ತಿಳಿಸಿದರು. ಸೇರಿರುವ ಎಲ್ಲಾ ಸಮಾಜಬಾಂಧವರಿಗೆ ಕೃತಜ್ಞತೆ ಅರ್ಪಿಸಿದರು. ನಂತರ ಪ್ರಸಾದ ಭೋಜನಕ್ಕಾಗಿ ಜನರು ತೆರಳಿದರು. ದೂರದ ಚೆನ್ನೈಯಲ್ಲಿ ಈ ಬಾರಿ ಚಾತುರ್ಮಾಸ ವ್ರತಾಚರಣೆ ನಡೆಸುತ್ತಿರುವ ಗುರುಗಳ ಭೇಟಿಗಾಗಿ ಸೇರಿದ ಭಕ್ತರಲ್ಲಿ ಊರಿನಲ್ಲಿಯೇ ಇದ್ದೇವೆ ಎಂಬ ಭಾವನೆ ಮೂಡುತ್ತಿತ್ತು.



ಮಂಗಳೂರಿನ ಸುಬ್ರಹ್ಮಣ್ಯ ಸಭಾ ವತಿಯಿಂದ ಶ್ರೀ ಕರುಣ್‌ರಾವ್‌ಬೆಳ್ಳೆ ಇವರು ಮುತು ವರ್ಜಿ ವಹಿಸಿ ಸುಮಾರು 170 ಮಂದಿಯನ್ನು ಮಂಗಳೂರಿನಿಂದ ಚೆನ್ನೈವರೆಗೆ ರೈಲಿನಲ್ಲಿ ಬರುವಂತೆ ಮಾಡುವಲ್ಲಿ ಯಶಸ್ವಿಯಾದರು. ಹಾಗೆಯೇ ಅಲ್ಲಿಯ ವಾಸ್ತವ್ಯ ಎಲ್ಲವನ್ನು ಅಚ್ಚುಕಟ್ಟಾಗಿ ನೆರವೇರಿಸಿದ್ದರು. ಹಾಗೆಯೇ ಉಡುಪಿಯಿಂದಲೂ ರೈಲಿನಲ್ಲಿ ತಾ.8-9-12ಕ್ಕೆ ಸುಮಾರು 28 ಮಂದಿ, ಹಾಗೆಯೇ ಒಂದು ಬಸ್ಸಿನಲ್ಲಿ 36 ಜನ ಹೊರಟು ಕೆಲವರು ಭೇಟಿಯ ದಿನವೇ ವಾಪಸ್ಸು ಆಗಮಿಸಿದ್ದರು. ಇನ್ನು ಕೆಲವರು 10ನೇ ತಾರೀಕಿನಂದು ಹಾಗೂ 11ರಂದು ವಾಪಾಸ್ಸಾದರು. ಉಡುಪಿಯ ಶಾರದಾ ಮಂಟಪದಿಂದ ಹೊರಟವರಿಗೆ 9-9-2012 ರಾತ್ರಿ ಹಾಗೂ 10-9-12ರವರೆಗೆ ಉಳಿಯುವ ವ್ಯವಸ್ಥೆ ಹಾಗೂ ಇತರ ವ್ಯವಸ್ಥೆಗಾಗಿ ನಮ್ಮವರಾದ ಶ್ರೀ ಕೆ. ಜಯಪ್ರಕಾಶ ರಾವ್ ರವರು ಮುತುವರ್ಜಿ ವಹಿಸಿ ನಮ್ಮೊಡನೆ ಸಹಕರಿಸಿದ್ದಾರೆ. ಇವರಿಗೆ ಸಂಘದ ಪರವಾಗಿ ಕಾರ್ಯದರ್ಶಿಯವರು ಅನಂತ ಕೃತಜ್ಞತೆ ಯನ್ನು ಸಲ್ಲಿಸಿರುತ್ತಾರೆ.

ಚೆನ್ನೈಯಲ್ಲಿ ನೆಲೆಸಿರುವ ಶ್ರೀ ಐ.ಕೆ. ಸದಾಶಿವ ರಾವ್ ಇವರು ವಿಶೇಷ ಮುತುವರ್ಜಿ ವಹಿಸಿ ನಮ್ಮ ಸಮಾಜ ಬಾಂಧವರಿಗೆ ಮಾಡಿದ ಸಹಾಯಕ್ಕಾಗಿ ಕಾರ್ಯದರ್ಶಿ ಯವರು ಅಭಿನಂದನೆ ಸಲ್ಲಿಸಿದ್ದಾರೆ.

ಶ್ರೀ ಕರುಣಾಕರ ಬೆಳ್ಳೆ ಮತ್ತು ಸುಬ್ರಹ್ಮಣ್ಯ ಸದನದ ಎಲ್ಲರಿಗೂ ಸಂಘದ ಪರವಾಗಿ ಕಾರ್ಯದರ್ಶಿಯವರು ಕೃತಜ್ಞತೆ ಸಲ್ಲಿಸಿದ್ದಾರೆ. ಹಾಗೆಯೇ ಉಡುಪಿಯಿಂದ ಚೆನ್ನೈಯವರೆಗೆ ಗುರುಗಳ ಕೃಪೆಗೆ ಪಾತ್ರರಾದ ಎಲ್ಲರಿಗೂ ಸಂಘಟಕರ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸಿದ್ದಾರೆ.


**-ಕಾರ್ಯದರ್ಶಿ**

# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

**ಶ್ರೀ ಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576 102.**







॥ನಮೋ ದೇವ್ಯೈ ಮಹಾದೇವ್ಯೈ ಶಿವಾಯ್ಯೈ ಸತತಂ ನಮಃ॥

# ಆಮಂತ್ರಣ

ಮಾನ್ಯ ಸಮಾಜ ಬಾಂಧವರೇ,

ಸ್ವಸ್ತಿ! ಶ್ರೀ ನಂದನ ನಾಮ ಸಂವತ್ಸರದ ತುಲಾ ಮಾಸ ದಿನ ೮ ಸಲುವ ಅಶ್ವಯುಜ ಶುದ (ದಶಮಿ) ೧೦ ಯು, ತಾ.24-10-2012ನೇ ಬುಧವಾರ

**ವಿಜಯದಶಮಿ ದಿನದಂದು**

# ಶ್ರೀ ಚಂಡಿಕಾಯಾಗ ಮತ್ತು ಶ್ರೀ ಶಾರದಾ ಪೂಜಾ

ಕಾರ್ಯಕ್ರಮವು ಶ್ರೀ ಶಾರದಾ ಮಂಟಪದಲ್ಲಿ ಜರಗಲಿದೆ. ಸರ್ವರೂ ಬಂಧು-ಬಾಂಧವರೊಡಗೂಡಿ ಆಗಮಿಸಿ, ಪೂರ್ವಾಹ್ನ ಮತ್ತು ಅಪರಾಹ್ನದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಸಂಪನ್ನಗೊಳಿಸಬೇಕೆಂದು ಅಪೇಕ್ಷಿಸುತ್ತೇವೆ.

**ಸಿ. ಎಸ್. ರಾವ್**
ಅಧ್ಯಕ್ಷರು

**ಬಿ. ಕೃಷ್ಣಮೂರ್ತಿ ರಾವ್**
ಕಾರ್ಯದರ್ಶಿ

**ಹಾಗೂ ಕಾರ್ಯಕಾರಿ ಸಮಿತಿಯ ಸವಿನಯ ಆಮಂತ್ರಣ**

ವಿ.ಸೂ. : ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರವನ್ನು ನೀಡಲಾಗುವುದು.

**ಸಮಾಜ ಬಾಂಧವರು ಈ ಪ್ರಕಟಣೆಯನ್ನೇ ಆಮಂತ್ರಣ ಎಂದು ತಿಳಿಯಬೇಕಾಗಿ ವಿನಂತಿ.**

**ಸಂಪಾದಕ ಮಂಡಳಿ**

ವೈ. ಮೋಹನ ರಾವ್

ಎಚ್.ಎನ್. ಶ್ಯಾನುಭಾಗ್

ಪ್ರಕಾಶ್ ರಾವ್ ಕೋಲ್ಪೆ

ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

ಸಮಾಜ ಬಾಂಧವರು ಯಾವುದೇ ಲೇಖನ, ಸುದ್ದಿ, ವರದಿ, ಇತ್ಯಾದಿಗಳನ್ನು ಕಳುಹಿಸುವಾಗ ತಮ್ಮ ಹೆಸರು ಮತ್ತು ವಿಳಾಸವನ್ನು ನಮೂದಿಸಿ ಸಹಕರಿಸಬೇಕಾಗಿ ವಿನಂತಿ.

-ಸಂಪಾದಕ ಮಂಡಳಿ

## ಸುಭಾಷಿತ-ನೀತಿಶಾಸ್ತ್ರ

**ಪಾದಪಾನಾಂ ಭಯಂ ವಾತಾತ್ಪದ್ಮಾನಾಂ**
**ಶಿಶಿರಾದ್ಭಯಮ್ ।**
**ಪರ್ವತಾನಾಂ ಭಯಂ ವಜ್ರಾತ್ಸಾಧೂನಾಂ**
**ದುರ್ಜನಾದ್ಭಯಮ್ ॥**

ಮರಗಳಿಗೆ ಗಾಳಿಯನ್ನು ಕಂಡರೆ ಹೆದರಿಕೆ. ಕಮಲಗಳಿಗೆ ಚಂದ್ರನನ್ನು ಕಂಡರೆ ಹೆದರಿಕೆ. ಪರ್ವತಗಳಿಗೆ ವಜ್ರಾಯುಧವನ್ನು ಕಂಡರೆ ಹೆದರಿಕೆ. ಒಳ್ಳೆಯವರಿಗೆ ದುಷ್ಟರನ್ನು ಕಂಡರೆ ಹೆದರಿಕೆ.

★★★★

**ಅತಿದರ್ಪೇ ಹತಾ ಲಂಕಾ ಹ್ಯತಿಮಾನೇ ಚ**
**ಕೌರವಾಃ ।**
**ಅತಿದಾನಾತ್ ಬಲಿರ್ಬದ್ಧಃ ಸರ್ವಮತ್ಯಂತ**
**ಗರ್ಹಿತಮ್ ॥**

ಅತಿಯಾದ ದರ್ಪದಿಂದ ರಾವಣ ಲಂಕೆಯನ್ನು ಕಳೆದುಕೊಂಡ. ಅತಿಯಾದ ದ್ವೇಷದಿಂದ ಕೌರವರು ನಾಶವಾದರು. ಅತಿದಾನದಿಂದ ಬಲಿ ಚಕ್ರವರ್ತಿ ತನಗೆ ನಿಲ್ಲಲೂ ಜಾಗ ಇಲ್ಲದಂತೆ ಮಾಡಿಕೊಂಡ. ಯಾವುದು ಅತಿಯಾದರೂ ಒಂದು ಒಂದು ಅನರ್ಥವೇ ಸಂಭವಿಸುತ್ತದೆ.

★★★★


**ಶನೈಃ ಪಂಥಾಃ ಶನೈಃ ಕಂಥಾಃ ಶನೈಃ**
**ಪರ್ವತಮಸ್ತಕೇ ।**
**ಶನೈರ್ವಿದ್ಯಾ ಶನೈರ್ವಿತ್ತಂ ಪಂಚೈತಾನಿ**
**ಶನೈಃ ಶನೈಃ ॥**

ನಿಧಾನವಾಗಿ ದಾರಿ ಸವೆಸಬೇಕು. ನಿಧಾನವಾಗಿ ಯಾಚಿಸಬೇಕು. ನಿಧಾನವಾಗಿ ಬೆಟ್ಟಹತ್ತಬೇಕು. ನಿಧಾನವಾಗಿ ವಿದ್ಯಾರ್ಜನೆ ಹಾಗೂ ಧನಾರ್ಜನೆ ಮಾಡಬೇಕು. ಸಾವಧಾನದಿಂದ ಅಷ್ಟಷ್ಟಾಗಿ ಮಾಡಿದಾಗಲೇ ಈ ಐದು ಸಂಗತಿಗಳು ಸಿದ್ಧಿಸುತ್ತವೆ.

*ಸಂಗ್ರಹ : ಎಚ್.ಎನ್.ಶ್ಯಾನುಭಾಗ್*

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



**- ಕೆ. ಆತ್ಮಾರಾಮ ಶಾಸ್ತ್ರೀ**
**ಬೆಂಗಳೂರು**

(ಹಿಂದಿನ ಸಂಚಿಕೆಯಿಂದ...)

ತನ್ನ ಪತ್ನೀ ಪುತ್ರರ ಸಹಿತ ಶ್ರೀ ಹರಿಯ ಪಾದಗಳನ್ನು ತೊಳೆದು ತೀರ್ಥವನ್ನು ತಲೆಯ ಮೇಲೆ ಧರಿಸಿದನು. ರೇಷ್ಮೆಯ ವಸ್ತ್ರಗಳಿಂದ, ಅನರ್ಘ್ಯವಾದ ಆಭೂಷಣಗಳಿಂದ ಅರ್ಚಿಸಿದನು. ಆನಂದದಿಂದ ಅವನ ಕಣ್ಣುಗಳು ತುಂಬಿ ಬಂದವು, ಇಡೀ ಸಭೆಯೇ ಎದ್ದು ನಿಂತು ಪರಮಾತ್ಮನಿಗೆ ನಮಸ್ಕರಿಸಿ ಜಯಘೋಷ ಮಾಡಿತು. ಆದರೆ ದಮಘೋಷನ ಮಗನಾದ ಶಿಶುಪಾಲನು ಭಗವಂತನ ಗುಣಗಾನವನ್ನು ಸಹಿಸದೆ ತನ್ನ ಪೀಠದಿಂದ ಎದ್ದು ನಿಂತು ಕಠೋರವಾದ ಮಾತುಗಳನ್ನಾಡಿದನು ''ಕಾಲವೇ ಎಲ್ಲದಕ್ಕೂ ಪ್ರಭು, ಅದನ್ನು ಮೀರಲಾಗುವುದಿಲ್ಲ ಎಂಬ ಶ್ರುತಿಯ ಮಾತು ನಿಜವಾಯಿತು ನೋಡಿ. ಇಲ್ಲಿ ವಯೋವೃದ್ಧರು, ಜ್ಞಾನವೃದ್ಧರು ಮತ್ತು ಧರ್ಮ ವೃದ್ಧರಿದ್ದರೂ ಮಕ್ಕಳ ಹುಡುಗಾಟಿಕೆಯ ಮಾತುಗಳಿಂದ ಪ್ರಭಾವಿತರಾಗುವುದೆಂದರೇನು? ಇಲ್ಲಿ ಸದಸಸ್ಪತಿಗಳಿದ್ದೀರಿ, ನಿಮಗೆ ಸರಿ-ತಪ್ಪು ಗಳ ವಿವೇಕ ಚೆನ್ನಾಗಿದೆ. ನೀವು ಸಹದೇವನೆಂಬ ಬಾಲಕನ ಮಾತನ್ನು ಅನುಮೋದಿಸುವುದಾ? ತಪಸ್ಸು, ವಿದ್ಯೆ, ವ್ರತಗಳಲ್ಲಿ ನಿಷ್ಠರಾದ ಜ್ಞಾನದಿಂದ ನಿಷ್ಕಲ್ಮಷರಾದ, ಶ್ರೇಷ್ಠಋಷಿಗಳೆನಿಸಿರುವ, ಲೋಕಪಾಲರಿಂದಲೂ ಪೂಜಿತರಾದ ಸದಸಸ್ಪತಿಗಳನ್ನು ಬಿಟ್ಟು ಗೋವಳನಾದ, ಕುಲ ಕಳಂಕನಾದ ಮನುಷ್ಯನನ್ನು ಪೂಜಿಸುವುದೆಂದರೆ ಕಾಗೆಗೆ ಪುರೋಡಾಶವನ್ನು ಅರ್ಪಿಸಿದಂತೆಯೇ ಸರಿ, ಇವನಿಗೆ ವರ್ಣವಿಲ್ಲ, ಆಶ್ರಮವಿಲ್ಲ, ಕುಲವಿಲ್ಲ, ಧರ್ಮವಿಲ್ಲ. ಇವನು ಸ್ವಚ್ಛಂದಚಾರಿ. ಸದ್ಗುಣಗಳ ಗಂಧವೂ ಇವನಲ್ಲಿಲ್ಲ ಇಂಥವನಿಗೆ ಪೂಜೆ? ಇವನ ಕುಲವನ್ನು ಯಯಾತಿಯೇಶಪಿಸಿದ್ದಾನೆ. ಅದಕ್ಕೆ ಸತ್ಕುಲ ಪ್ರಸೂತರು ಇವನ ಕುಲಗೆಟ್ಟ ಕುಲವನ್ನು ಬಹಿಷ್ಕರಿಸಿದ್ದಾರೆ. ಈ ಕುಲದವರು ಮಹಾ ಕುಡುಕರು ಇಂಥಕುಲಹೀನನನ್ನು ಪೂಜಿಸುವುದಾ? ಇವರೆಲ್ಲ ಬ್ರಹ್ಮರ್ಷಿಗಳಿಂದ ಸೇವಿತವಾದ ಮಥುರೆಯನ್ನು ಬಿಟ್ಟು ಸಮುದ್ರದಲ್ಲಿ ಕೋಟೆಕಟ್ಟಿಕೊಂಡು ನೆಲೆಸಿದ್ದಾರೆ. ಈ ದಸ್ಯುಗಳು ಪ್ರಜಾಪೀಡಕರು'', ಭಾಗ್ಯಚ್ಯುತನಾದ ಶಿಶುಪಾಲನು ಹೀಗೆಲ್ಲ ಗಳಹಿದರೂ ಶ್ರೀಕೃಷ್ಣನು ಏನೂ ಪ್ರತಿಕ್ರಿಯೆ ತೋರಿಸದೆ ಸುಮ್ಮನಿದ್ದನು. ಸದಸ್ಯರಲ್ಲಿ ಅನೇಕರು ಭಗವನ್ನಿಂದೆಯನ್ನು ಸಹಿಸಲಾಗದೆ ಕಿವಿಮುಚ್ಚಿಕೊಂಡು ಸಭೆಯಿಂದ ಎದ್ದು ಹೋದರು. ಪಾಂಡವರು, ಮತ್ಸ್ಯರು, ಕೈಕಯರು ಮತ್ತು ಸೃಂಜಯರು ಕೋಪೋದ್ರಿಕ್ತರಾಗಿ ಆಯುಧಗಳನ್ನೆತ್ತಿಕೊಂಡು ಶಿಶುಪಾಲನನ್ನು ಕೊಲ್ಲಲು ಮುಂದಾದರು. ಆದರೆ ಮೂರ್ಖ ಶಿಶುಪಾಲ ಇದಕ್ಕೆ ಹೆದರಲಿಲ್ಲ. ಅವನೂ ಗುರಾಣಿ, ಖಡ್ಗಗಳನ್ನು ಹಿಡಿದುಕೊಂಡು ಹೊಡೆದಾಟಕ್ಕೆ ಸಜ್ಜಾದನು. ಆಗ ಭಗವಂತನು ತನ್ನವರನ್ನು ತಡೆದು ತನ್ನ ಚಕ್ರದಿಂದ ಚೇದಿರಾಜನ(ಶಿಶುಪಾಲನ) ತಲೆಯನ್ನು ತರಿದು ಬಿಟ್ಟನು. ಅದನ್ನು ನೋಡಿ ಶಿಶುಪಾಲನ ಅನುಯಾಯಿಗಳು ಹೆದರಿ ಜೀವ ಉಳಿಸಿಕೊಳ್ಳಲು ದಿಕ್ಕಾಪಾಲಾಗಿ ಓಡಿದರು. ಶಿಶುಪಾಲನ ದೇಹದಿಂದ ಹೊರಟ ಒಂದು ಜ್ಯೋತಿಯು ಎಲ್ಲರೂ ನೋಡುತ್ತಿರುವಂತೆ ಶ್ರೀಹರಿಯ ಹೃದಯವನ್ನು ಪ್ರವೇಶಿಸಿತು.

ಅನಂತರ ಯುಧಿಷ್ಠಿರನು ಎಲ್ಲರನ್ನು ಯಥಾಯೋಗ್ಯವಾಗಿ ಪೂಜಿಸಿ, ಬ್ರಾಹ್ಮಣರನ್ನು ದಾನ, ದಕ್ಷಿಣೆಗಳಿಂದ ತೃಪ್ತಿಪಡಿಸಿ, ಅವಭೃಥ ಸ್ನಾನವನ್ನು ಮಾಡಿದನು. ಈಯಾಗದಿಂದಾಗಿ ಎಲ್ಲ ರಾಜರ ಮಧ್ಯದಲ್ಲಿ ಯುಧಿಷ್ಠಿರನು ದೇವೇಂದ್ರನಂತೆ ರಾರಾಜಿಸಿದನು.

ಯಜ್ಞಕ್ಕಾಗಿ ಎಲ್ಲ ಸಿದ್ಧತೆಗಳು ಆದವಷ್ಟೆ? ಭೀಮನು ಪಾಕಶಾಲೆಯ ಅಧ್ಯಕ್ಷನೂ, ದುರ್ಯೋಧನನು ಧನಾಧ್ಯಕ್ಷನೂ ಆಗಿದ್ದರು. ಸಹದೇವನು ಅತಿಥಿ-ಅಭ್ಯಾಗತರ ಸತ್ಕಾರಕ್ಕೆ ನಿಯುಕ್ತನಾದನು. ನಕುಲನು ದ್ರವ್ಯಸಾಧನವನ್ನು ನೋಡಿಕೊಂಡನು. ಅರ್ಜುನನು ಗುರುಹಿರಿಯರ ಶುಶ್ರೂಷೆಯ ಹೊಣೆಯನ್ನು ವಹಿಸಿಕೊಂಡನು. ಶ್ರೀಕೃಷ್ಣನು ಅತಿಥಿಗಳ ಪಾದತೊಳೆದನು. ಬಡಿಸುವ ಕೆಲಸಕ್ಕೆ ದ್ರೌಪದಿ ಮುಖ್ಯಳು, ದಾನ, ಧರ್ಮಕ್ಕೆ ಕರ್ಣನು ನಿಂತನು ಯುಯುಧಾನ ಮೊದಲಾದವರು ಯಜ್ಞದ ಪರಿಕರ್ಮಿಗಳಾದರು, ಯಜ್ಞ ಪರಿಸಮಾಪ್ತಿಯಾದ ಮೇಲೆ ಯುಧಿಷ್ಠರನು ದೇವಗಂಗೆಯಲ್ಲಿ ಅವಭೃತಸ್ನಾನ ಮಾಡಲು ವೈಭವದಿಂದ ಹೋದನು. ಪತ್ನಿಸಹಿತ ಅವಭೃತ ಸ್ನಾನವನ್ನು ಮಾಡಿದನು. ಅವನ ಸ್ನಾನದ ಸಮನಂತರ ಅದೇ ಗಂಗೆಯಲ್ಲಿ ಎಲ್ಲ ವರ್ಣದವರು ಸ್ನಾನ ಮಾಡಿ ತಮ್ಮ ಪಾಪಗಳನ್ನು ಕಳೆದುಕೊಂಡರು.

ಹೀಗೆ ಯಾಗ ಸಮಾಪ್ತಿಯಾಗಲು ಬಂದಂತಹ ಎಲ್ಲ ಅತಿಥಿ ಅಭ್ಯಾಗತರು ತಮ್ಮ ಸ್ಥಳಗಳಿಗೆ ತೆರಳಿದರು. ಶ್ರೀ ಕೃಷ್ಣನೂ ಸಪರಿವಾರ ಹೊರಡಲನುವಾದನು. ಆಗ ಯುಧಿಷ್ಠನಿಗೆ ಅವನ ವಿಯೋಗವನ್ನು ಸಹಿಸುವುದಕ್ಕಾಗಲಿಲ್ಲ. ಅವನು ಅತ್ಯಂತ ನಮ್ರನಾಗಿ ಭಗವಂತನಾದರೂ ಸ್ವಲ್ಪ ಕಾಲ ಇಂದ್ರಪ್ರಸ್ಥದಲ್ಲಿರುವಂತೆ ಪ್ರಾರ್ಥಿಸಿದನು. ಗೋವಿಂದನು ಧರ್ಮರಾಯನ ಮನಸ್ಸಂತೋಷಕ್ಕಾಗಿ ತನ್ನ ಪರಿವಾರದವರನ್ನು ದ್ವಾರಕೆಗೆ ಕಳುಹಿಸಿಕೊಟ್ಟು ತಾನು ಉಳಿದುಕೊಂಡನು. ಹೀಗೆ ಅನೇಕ ಆತ್ಮೀಯರನ್ನು ಧರ್ಮಜನು ಇಂದ್ರಪ್ರಸ್ಥದಲ್ಲಿ ಉಳಿಸಿ ಕೊಂಡನು.

ದುರ್ಯೋಧನನು ಯುಧಿಷ್ಠರನ ಮಯ ನಿರ್ಮಿತ ಅರಮನೆಯ ಸಂಪತ್ತನ್ನು, ಸೌಂದರ್ಯವನ್ನು ರಾಜಸೂಯದ ವೈಭವವನ್ನು ವೀಕ್ಷಿಸಿ ಬಹುವಾಗಿ ಕರುಬಿದನು. ಅಲ್ಲದೆ ದ್ರೌಪದಿಯು ವೈಭವೋಪೇತ ಸಾಮಾಗ್ರಿಗಳಿಂದ ತನ್ನ ಪತಿಗಳ ಸೇವೆ ಮಾಡುವುದನ್ನು ನೋಡಿ ಅವನ ಮತ್ಸರದ ಬೆಂಕಿ ಧಗಧಗನೆ ಉರಿಯಿತು. ದ್ರೌಪದಿ ಆ ರೀತಿ ಮೆರೆಯುವುದು ಅವನಿಗೆ ಮರೆಯದ ವಿಷಯವಾಯಿತು, ಅವನ ಹೊಟ್ಟೆಯುರಿ ಶಾಂತವಾಗಲೇ ಇಲ್ಲ.

ಒಂದು ದಿನ ಯುಧಿಷ್ಠಿರನು ತನ್ನ ಅದ್ಭುತವಾದ ಮಯ ಸಭೆಯಲ್ಲಿ ಸ್ವರ್ಣಸಿಂಹಾಸನದ ಮೇಲೆ ಕುಳಿತಿದ್ದನು. ಭಗವಂತನೂ ಪಕ್ಕದಲ್ಲಿ ಆಸೀನನಾಗಿದ್ದನು. ಬಂಧುಗಳು, ಇತರ ಅನೇಕ ರಾಜರೂ ಅಲ್ಲಿ ನೆರೆದಿದ್ದರು. ಆಗ ಅಸಮಾಧಾನದಿಂದ ಕುದಿಯುತ್ತಿದ್ದ ದುರ್ಯೋಧನನು ತನ್ನ ತಮ್ಮಂದಿರ ಜೊತೆಯಲ್ಲಿ ಖಡ್ಗವನ್ನು ಹಿಡಿದುಕೊಂಡು ದ್ವಾರಪಾಲಕರನ್ನು ದಿಕ್ಕರಿಸಿ ಸಭೆಯನ್ನು ಪ್ರವೇಶಿಸಿದನು. ಆ ಅದ್ಭುತ ಭವನದಲ್ಲಿ ಅಪರಿಚಿತರು ಯಥೇಚ್ಛವಾಗಿ ಓಡಾಡುವುದು ದುಷ್ಕರವಾಗಿತ್ತು. ಆದುದರಿಂದ ದುರ್ಯೋಧನನು ನೀರಿಲ್ಲದ ಕಡೆ ನೀರಿದೆ ಎಂದು ಭ್ರಮಿಸಿ ತನ್ನ ಪಂಚೆಯನ್ನು ಎತ್ತಿ ಹಿಡಿದುಕೊಂಡು ನಡೆದನು. ಅಲ್ಲಿ ನೀರಿಲ್ಲದ್ದನ್ನು ಕಂಡು ನಿಜವಾಗಿಯೂ ನೀರಿರುವಲ್ಲಿ ನೀರಿಲ್ಲವೆಂದು ನಡೆಯಲು ಹೋಗಿ ನೀರಿನಲ್ಲಿ ಬಿದ್ದು ಬಿಟ್ಟನು.

(ಮುಂದುವರಿಯುವುದು)

## ಹೊಸ ಬೆಳಕು

**ಪುಸ್ತಕ ಪರಿಚಯ :**

**''ನೀನು''**

*ಲೇಖಕರು :* ಕಾತ್ಯಾಯಿನಿ ಕುಂಜಿಬೆಟ್ಟು
*ಪ್ರಕಾಶಕರು :* ಶ್ರೀನಿವಾಸ ಪುಸ್ತಕ ಪ್ರಕಾಶನ
*ಮುಖಪುಟ :* ಜನಾರ್ದನ ಹಾವಂಜೆ
*ರೇಖಾಚಿತ್ರಗಳು :* ಶ್ರೀಗುರುರಾಜ ಮಾರ್ಪಳ್ಳಿ
*ಅಕ್ಷರ ಜೋಡಣೆ :* ಸವಿತಾ ಶಾಂತಪ್ರಿಯ, ಉಡುಪಿ
*ಬೆಲೆ :* ರೂ.55/-

'ನೀನು' ಕವನ ಸಂಗ್ರಹದ ಲೇಖಕಿ ಕಾತ್ಯಾಯಿನಿ ಕುಂಜಿಬೆಟ್ಟು ಅವರ ಹೇಳಿಕೆಯಂತೆ - ''ನನ್ನ ಮೊದಲ ಕವನ ಸಂಕಲನವಿದು. ಬೇರೆ ಬೇರೆ ಸಂದರ್ಭ, ಸನ್ನಿವೇಶಗಳನ್ನು, ಅನುಭವಗಳನ್ನು ಹೊತ್ತು ಮೂಡಿದ ಭಾವಗಳನ್ನು ಅಕ್ಷರ ರೂಪಕ್ಕಿಳಿಸುತ್ತಿದ್ದೆ. ಕವಿಗೋಷ್ಠಿಗಳಲ್ಲಿ, ಸಮ್ಮೇಳನಗಳಲ್ಲಿ ಪ್ರಸ್ತುತಪಡಿಸಿದ ಕವನಗಳು, ತರಂಗ ಮತ್ತು ಉದಯವಾಣಿಯಲ್ಲಿ ಪ್ರಕಟವಾದ ಕೆಲವು ಕವನಗಳು ಹಾಗೂ ಅಪ್ರಕಟಿತ ಕವನಗಳು ಇವುಗಳೆಲ್ಲವನ್ನೂ ಈ ಕೃತಿಯೊಳಗೆ ಬಂಧಿಸಿದ್ದೇನೆ. ಕವನ ಸಂಕಲನವು ಒಂದು ರೂಪವನ್ನು ಪಡೆಯಲು ಕಾರಣರಾದವರಿಗೆ ತಲೆಬಾಗುವ ಕೆಲಸವನ್ನಿಲ್ಲಿ ಮಾಡುತ್ತಿದ್ದೇನೆ''.

ಜ.ಕಾ ಅವರು ಕೃತಿಯ ಬಗ್ಗೆ ಹೇಳುತ್ತಾ ''ಪ್ರಾಥಮಿಕ, ಪ್ರೌಢ ಹಾಗೂ ಕಾಲೇಜು ತರಗತಿಗಳಿಗೆ ಬೋಧಿಸಿರುವ ಅನುಭವವುಳ್ಳವರು. ರಂಗಭೂಮಿ ಹಾಗೂ ಹಿಂದುಸ್ಥಾನಿ ಗಾಯನ ಪರಂಪರೆಯ ಪರಿಶ್ರಮ ಹಾಗೂ ಪ್ರೇರಣೆಯಿಂದ ಈ ಕ್ಷೇತ್ರಗಳಲ್ಲೂ ಹವ್ಯಾಸಿಯಾಗಿ ತೊಡಗಿಸಿಕೊಂಡಿರುವರು. ತುಳು-ಕನ್ನಡ ಜಾನಪದ ಹಾಗೂ ಶಿಷ್ಟ ಪರಂಪರೆಗಳ ಪರಿಜ್ಞಾನವುಳ್ಳ ಕತೆ-ಕಾದಂಬರಿಗಾರ್ತಿಯೂ ಹೌದು. ರಂಗಶಿಬಿರಗಳಲ್ಲಿ, ಸಾಹಿತ್ಯ ಸಮ್ಮೇಳನ ಹಾಗೂ ವಿವಿಧ ಸಂಘ ಸಂಸ್ಥೆಗಳ ಕವಿಗೋಷ್ಠಿಯಲ್ಲಿ, ಆಕಾಶವಾಣಿ-ದೂರದರ್ಶಗಳಲ್ಲಿ, ವಿವಿಧ ಪತ್ರಿಕೆಗಳ ಕಲಾವಿಮರ್ಶನ ಅಂಕಣಗಳಲ್ಲಿ ತನ್ನ ಪ್ರತಿಭೆಯನ್ನು ಈಗಾಗಲೇ ಪ್ರಕಟಿಸಿ ಪರಿಚಿತರಾಗಿರುವ ಕಾತ್ಯಾಯಿನಿ ಅವರ ಚೊಚ್ಚಲ ಕವನ ಸಂಕಲನ ಇದು''.

ಕೃತಿಯಲ್ಲಿ ಸುಬ್ರಾಯ ಚೊಕ್ಕಾಡಿ ಅವರು ತಿಳಿಸಿದಂತೆ ''ಕಾತ್ಯಾಯಿನಿ ಕುಂಜಿಬೆಟ್ಟು ಅವರು ಒಂದು ಗಟ್ಟಿಯಾದ ಸಾಂಸ್ಕೃತಿಕ ಆವರಣದಲ್ಲಿ ಅರಳಿದ ಪ್ರತಿಭೆ. ಬಹುಮುಖ ಪ್ರತಿಭೆಯ ಗುರುರಾಜ ಮಾರ್ಪಳ್ಳಿಯವರು ಕಾತ್ಯಾಯಿನಿಯವರ ಸೋದರಮಾವ. ಹಿಂದೂಸ್ಥಾನಿ ಸಂಗೀತ ಕ್ಷೇತ್ರದಲ್ಲಿ ಒಳ್ಳೆಯ ಹೆಸರು ಮಾಡಿರುವ ರವಿಕಿರಣ ಹಾಗೂ ಶಶಿಕಿರಣರು ಕಾತ್ಯಾಯಿನಿಯವರ ಅಣ್ಣಂದಿರು. ಹಾಗಾಗಿ ಕಾತ್ಯಾಯಿನಿ-ಸಹಜವಾಗಿಯೇ ಸಂಗೀತ, ಸಾಹಿತ್ಯ, ನಾಟಕ ಮೊದಲಾದವುಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡವರು''.

ಈ ಕೃತಿಯಲ್ಲಿ ಒಟ್ಟು ನಲ್ವತ್ತು ಕವನಗಳಿವೆ. ಪ್ರತಿಯೊಂದು ಕವನಕ್ಕೂ ಆಕರ್ಷಕವಾದ ರೇಖಾಚಿತ್ರವಿದೆ. 'ನೀನು' ಕವಿತೆ ಹೀಗೆ ಹೇಳುತ್ತದೆ :

*ಸೂರ್ಯ ನಿನ್ನ ಕೈಯಲಿ ಕೆಂಪು*
*ಚೆಂಡಂತೆ ಎತ್ತರಕೆ ಪುಟಿದು ಬೆಂಕಿ*
*ಉಂಡೆಯಾಗಿ ಗಾಳಿಯಲಿ ತಣಿದು*
*ಕೆಂಡ ಕಡಲ ಹಾರುವನಂತೆ*
*ವಿರಹದ ಕಾವಲಿ ಬೆಂದು*
*ಒಂಟಿ ಭೂಮಿಸತಿ ರಾತ್ರಿ ನೆನಪಲಿ*
*ತಮದ ಕಂಬಳಿ ಹೊದೆಯುವಳಂತೆ.....*

'ಕಬರ್ಗತ್ತಲೆ' ಕಾದಂಬರಿಗೆ ಪಣಿಯಾಡಿ ಪ್ರಶಸ್ತಿ, 'ತೊಗಲುಗೊಂಬೆಗೆ' ಮಲ್ಲಿಕಾಪ್ರಶಸ್ತಿ, 'ಮೂರು ನಾಟಕಗಳು' ಕೃತಿಗೆ ಅರಳು ಪ್ರಶಸ್ತಿ, 'ನಿದ್ರಾ ನಗರಿ' ಮಕ್ಕಳ ನಾಟಕಕ್ಕೆ ಉಡುಪಿ ರಥಬೀದಿ ಗೆಳೆಯರು 'ಕೆದ್ಲಾಯ ಸ್ಮಾರಕ ಪ್ರಶಸ್ತಿ' ಹಾಗೂ ಇನ್ನಿತರ ಪ್ರಶಸ್ತಿಗಳು ಲಭಿಸಿವೆ.

ಕರ್ನಾಟಕ ಜಾನಪದ ಅಕಾಡೆಮಿ 'ಜಾನಪದ ನಿಘಂಟು ಯೋಜನೆ-2011' ಉಡುಪಿಯಿಂದ ಕ್ಷೇತ್ರಕಾರ್ಯ ನಡೆಸಿದ್ದು ಪ್ರಸ್ತುತ ಪಳಕಳ ಸೀತಾರಾಮ ಭಟ್ಟರ ಸಮಗ್ರ ಕೃತಿಗಳ ಕುರಿತು ಪಿಹೆಚ್‌ಡಿ ಅಧ್ಯಯನ ನಿರತರಾಗಿದ್ದಾರೆ.

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ್ ರಾವ್, ಅಂಬಲಪಾಡಿ.

# ಕಾರ್ಕಳ ಪೆರ್ವಾಜೆ : ಅಂಗನವಾಡಿಗೆ ಕೊಡುಗೆ



ಕಾರ್ಕಳ ಅನಂತಶಯನದ ಬಳಿಯ ಪೆರ್ವಾಜೆ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಅಂಗನವಾಡಿಗೆ ಶ್ರೀ ಭುವನೇಂದ್ರ ಪ್ರೌಢಶಾಲಾ ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀ ವಿ. ಮನೋಹರ್ ರಾಯರು ಉದಾರವಾಗಿ ದೇಣಿಗೆ ನೀಡಿದ ದೊಡ್ಡ ಪ್ರೆಸ್ಟೀಜ್ ಕುಕ್ಕರ್, ದೊಡ್ಡ ಸ್ಟೀಲ್ ಡ್ರಂ ಮತ್ತು ಎಂಟು ಬೆಡ್ ಶೀಟುಗಳನ್ನು ಅಂಗನವಾಡಿಯ ಬಾಲವಿಕಾಸ ಸಮಿತಿ ಅಧ್ಯಕ್ಷೆ ಶ್ರೀಮತಿ ಸಾವಿತ್ರಿ ಮನೋಹರರವರು ಶಾಲಾ ಮುಖ್ಯೋಪಾಧ್ಯಾಯರು ಮತ್ತು ಅಂಗನವಾಡಿಯ ಕಾರ್ಯಕರ್ತೆಗೆ ಹಸ್ತಾಂತರ ಮಾಡಿದರು.

ಶ್ರೀಮತಿ ರಾಧಿಕಾರವರು ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಅಂಗನವಾಡಿಯ ಪುಟಾಣಿಗಳು ಮುದ್ದಾಗಿ ಪ್ರಾರ್ಥನೆ ಹಾಡಿದರು. ಕಾರ್ಕಳದ ಪುರಸಭಾ ಸದಸ್ಯ, ಕೊಡುಗೈ ದಾನಿ ಶ್ರೀ ಪ್ರಕಾಶ ರಾವ್ ವೇದಿಕೆಯಲ್ಲಿದ್ದು ಅಂಗನವಾಡಿಯ ಅಭಿವೃದ್ಧಿ ಬಗೆಗೆ ಮಾತನಾಡಿ ಶುಭ ಹಾರೈಸಿದರು. ಪ್ರಭಾರ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸುವರ್ಣ ಉಡುಪ ದಾನಿಗಳಿಗೆ ಹಾಗೂ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದ ಪೋಷಕರು ಮತ್ತು ಪುಟಾಣಿ ಮಕ್ಕಳಿಗೆ ಧನ್ಯವಾದವಿತ್ತರು. ಅಂಗನವಾಡಿಯ ಪುಟಾಣಿ ವಿಶ್ರುತ್ ಶರ್ಮ ಕಾರ್ಯಕ್ರಮದ ಪೋಟೋ ತೆಗೆದು ಎಲ್ಲರ ಪ್ರಶಂಸೆಗೆ ಪಾತ್ರವಾದುದು ವಿಶೇಷವಾಗಿತ್ತು.

**-ಸ್ವಾತಿ ಎ. ಶರ್ಮ, ಬೆಂಗಳೂರು**

# ರಾಮಕುಂಜ : ಕುಮಾರಿ ಕೃತಿಕಾ ಇವರಿಗೆ ಸನ್ಮಾನ




2011-12ನೇ ಸಾಲಿನ 7ನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಶ್ರೀ ರಾಮಕುಂಜೇಶ್ವರ ಸಂಸ್ಕೃತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಥಮ ಸ್ಥಾನದಲ್ಲಿ ಉತ್ತೀರ್ಣಳಾಗಿರುವ ಕು| ಕೃತಿಕಾ ಡಿ.ವಿ. ಇವಳನ್ನು ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶ್ವರ ಶ್ರೀಪಾದಂಗಳವರು ಹೃದಯ ಪೂರ್ವಕವಾಗಿ ಅಭಿನಂದಿಸಿದರು. ಇವಳು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಡೆಸಿದ ಭರತನಾಟ್ಯ ಜೂನಿಯರ್ ಪರೀಕ್ಷೆಯಲ್ಲಿಯೂ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾಳೆ. ಅಲ್ಲದೆ ಸಂಸ್ಕೃತ ಕಂಠಪಾಠ ಸ್ಪರ್ಧೆಯಲ್ಲಿ ಜಿಲ್ಲಾಮಟ್ಟದಲ್ಲಿ ಪ್ರಥಮ ಸ್ಥಾನ, ಭಾರತ ಸ್ಕೌಟ್, ಗೈಡ್, ಪ್ರತಿಭಾ ಕಾರಂಜಿ, ಧಾರ್ಮಿಕ ಪಠಣ (ಸಂಸ್ಕೃತ ಪ್ರಥಮ), ಸಂಸ್ಕೃತ ಜ್ಞಾನ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಪ್ರಥಮ ಸ್ಥಾನ ಪಡೆದಿದ್ದಾಳೆ. ಇವಳು ಶ್ರೀ ವಸಂತ ಕುಮಾರ್ ಡಿ., ಉಪನ್ಯಾಸಕರು, ರಾಮಕುಂಜ ಪದವಿ ಪೂರ್ವ ಕಾಲೇಜು ಮತ್ತು ಶ್ರೀಮತಿ ಜ್ಯೋತಿಶ್ರೀ, ಶಿಕ್ಷಕಿ ರಾಮಕುಂಜೇಶ್ವರ ಸಂಸ್ಕೃತ ಹಿರಿಯ ಪ್ರಾಥಮಿಕ ಶಾಲೆ ಇವರ ಪುತ್ರಿ.

ವರದಿ : **ವೈ.ಎನ್.ಪ್ರಭಾಕರ ರಾವ್**

# ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರಿ : ಮಹಾಸಭೆ

ಪಡುಬಿದ್ರಿಯಲ್ಲಿ 2010ರಲ್ಲಿ ಪ್ರಾರಂಭವಾದ ಸ್ಥಾನಿಕ ಬ್ರಾಹ್ಮಣ ಸಭಾ ಇದರ ಎರಡನೇ ವರ್ಷದ ಮಹಾಸಭೆಯು ತಾ.27-05-2012 ರಂದು ಶ್ರೀ ರಾಜರಾಜೇಶ್ವರಿ ಸಭಾಭವನ, ಏರ್ಮಾಳು ಇಲ್ಲಿ ಜರಗಿತು ಸಭೆಯು ಬೆಳಿಗ್ಗೆ 10.00ಗಂಟೆಗೆ ಸಂಘದ ಗೌರವಾಧ್ಯಕ್ಷರಾದ ಶ್ರೀ ಪಿ.ಬಿ. ವಾಸುದೇವ ರಾವ್ ಮತ್ತು ಅಧ್ಯಕ್ಷರಾದ ಶ್ರೀ ಎಂ ಕೆ. ಮೋಹನ ರಾವ್ ರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಯಲ್ಲಿ ಗತವರ್ಷದ ಕಾರ್ಯಕ್ರಮಗಳ ವರದಿ, ಖರ್ಚುವೆಚ್ಚಗಳ ವರದಿಯನ್ನು ಕಾರ್ಯದರ್ಶಿ ಸುಧಾಕರ ಬೆಳ್ಳೆಯವರು ಓದಿದರು.


ಮುಂದಿನ ವರ್ಷದಿಂದ ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮತ್ತು ಯುವ ವೇದಿಕೆಯನ್ನು ರಚಿಸಲು ತೀರ್ಮಾನಿಸಲಾಯಿತು. ತದನಂತರ ನಡೆದ ವಾರ್ಷಿಕ ಮಹೋತ್ಸವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ವೈ ಸುದರ್ಶನ ರಾವ್, ಅದಮಾರು, ಮುಖ್ಯ ಅತಿಥಿಯಾಗಿ ಶ್ರೀ ಎಂ. ದೇವಾನಂದ ಭಟ್‌ರವರು ವಹಿಸಿದ್ದರು. ಎಂ.ದೇವಾನಂದ ಭಟ್‌ರವರು ಉಡುಪಿಯಲ್ಲಿ ಜರಗಿದ ಸ್ಥಾನಿಕ ಸಮ್ಮೇಳನದ ನಿರ್ಣಯದ ಬಗ್ಗೆ ಸವಿವರವಾಗಿ ತಿಳಿಸಿದರು. ವೈ. ಸುದರ್ಶನ ರಾವ್ ಇವರು ಸಂದರ್ಭೋಚಿತವಾಗಿ ಮಾತನಾಡಿದ ಬಳಿಕ ಸಭೆಯಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಇಂಜಿನಿಯರಿಂಗ್ ಓದುವ ಅರ್ಹ ವಿದ್ಯಾರ್ಥಿ ಗಳಿಗೆ ವಿದ್ಯಾರ್ಥಿವೇತನವನ್ನು ನೀಡಲಾಯಿತು.

ವಾರ್ಷಿಕ ಮಹೋತ್ಸವಕ್ಕೆ ಮುಂಚೆ ಮಹಿಳಾವೇದಿಕೆಯ ಸದಸ್ಯರಿಂದ ನಾಟಕ ಮತ್ತು ನೃತ್ಯ ಕಾರ್ಯಕ್ರಮ ಜರಗಿತು. ಸುಮಾರು 250 ಜನ ಸಮಾಜ ಬಾಂಧವರು ಸಭೆಯಲ್ಲಿ ಭಾಗವಹಿಸಿದರು. ಮಧ್ಯಾಹ್ನ ಭೋಜನ ಕೂಟದೊಂದಿಗೆ ಮಹಾಸಭೆಯು ಮುಕ್ತಾಯವಾಯಿತು.

**-ಶ್ರೀನಿವಾಸ ಶರ್ಮ, ಪಾದಬೆಟ್ಟು**

# ಶ್ರೀಶಾರದಾ ವೇದಿಕೆಯ ಮಹಾಪೋಷಕರಾಗಿ

# ವೈ. ಮೋಹನ ರಾವ್



ನಮ್ಮ ಸಂಘದ ಶ್ರೀಶಾರದಾ ಪತ್ರಿಕೆಯ ಮೂಲಕ ಹೆಚ್ಚು ಚಿರಪರಿಚಿತರಾಗಿರುವ ಶ್ರೀ ವೈ. ಮೋಹನ ರಾವ್ ಅವರ ಮಾತಾಪಿತೃಗಳು ಶ್ರೀಮತಿ ಗಿರಿಜಾ ಮತ್ತು ಶ್ರೀ ಎರ್ಮಾಳು ಯೋಗೇಂದ್ರಯ್ಯರವರು. ವಾಣಿಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು 34 ವರ್ಷಗಳ ಕಾಲ ಬಾರ್ಕೂರು ನ್ಯಾಶನಲ್ ಪ.ಪೂ. ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿರುತ್ತಾರೆ. ನಿವೃತ್ತಿಯ ಬಳಿಕವೂ ಶೈಕ್ಷಣಿಕವಾಗಿ ಸಕ್ರಿಯರಾಗಿರುವ ಮೈಕ್ರೊ ಬಿಸಿನೆಸ್ ಮೆನೇಜ್‌ಮೆಂಟ್ ಕಾಲೇಜು, ಉಡುಪಿ, ಪೊಲಿಪು ಸರಕಾರಿ ಪದವಿಪೂರ್ವ ಕಾಲೇಜು, ಕಾಪು, ವಿದ್ಯೋದಯ ಪದವಿ ಪೂರ್ವ ಕಾಲೇಜು, ಉಡುಪಿ ಇಲ್ಲಿ ಅತಿಥಿ ಉಪನ್ಯಾಸಕ ರಾಗಿ ಕೆಲಸ ನಿರ್ವಹಿಸಿರುತ್ತಾರೆ. ಪ್ರಸ್ತುತ ಉಡುಪಿಯ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ತಮ್ಮ ಸೇವಾವಧಿಯಲ್ಲಿ ಪ.ಪೂ. ಕಾಲೇಜು ಶಿಕ್ಷಕರ ಸಂಘದ ಅಧ್ಯಕ್ಷ ಹಾಗೂ ಕಾರ್ಯದರ್ಶಿಯಾಗಿ ಮತ್ತು ಬುಲೆಟಿನ್‌ನ ಸಂಪಾದಕರಾಗಿಯೂ ಅನುಭವ ಪಡೆದಿರುವ ಇವರು ಉಡುಪಿ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾಗಿ ಮತ್ತು ಸುಹಾಸ ಹಾಸ್ಯ ಸಂಘದ ಸ್ಥಾಪಕ ಸದಸ್ಯರಾಗಿ, ಕೋಶಾಧಿಕಾರಿಯಾಗಿ, ಚಂದ್ರಕಾಂತಿ ಮಾಸಪತ್ರಿಕೆಯ ಸ್ಥಾಪಕ ಸಂಪಾದಕರಾಗಿ, ಶ್ರೀಶಾರದಾ ಕೋ-ಅಪರೇಟಿವ್ ಬ್ಯಾಂಕಿನ ಪ್ರವರ್ತಕ ನಿರ್ದೇಶಕರಲ್ಲೊಬ್ಬರಾಗಿ, 10 ವರ್ಷಗಳ ಕಾಲ ನಿರ್ದೇಶಕರಾಗಿ, ಹಾಗೆಯೇ ಯಕ್ಷ ಗಾನ ಕಲೆಯಲ್ಲೂ ವಿಶೇಷ ಆಸಕ್ತಿ ಬೆಳೆಸಿ ಕೊಂಡಿದ್ದು ಯಕ್ಷಗಾನ ಕಲಾಗಾರರಾಗಿ, ಸಾಹಿತ್ಯಿಕ-ಸಾಂಸ್ಕೃತಿಕ ಒಡನಾಟ ಹೊಂದಿದ್ದಾರೆ.

ನಮ್ಮ ಸಂಘದಲ್ಲಿ ಒಂದು ದಶಕಕ್ಕೂ ಮೀರಿ ನಿರ್ದೇಶಕರಾಗಿ ಮತ್ತು ಶ್ರೀಶಾರದಾ ಪತ್ರಿಕೆಯ ಪ್ರಾರಂಭದಿಂದಲೂ ಸಂಪಾದಕ ಮಂಡಳಿಯ ಸದಸ್ಯರಾಗಿ, ಈಗ ಪ್ರಸ್ತುತ ಪ್ರಧಾನ ಸಂಪಾದಕರಾಗಿ ಪತ್ರಿಕೆಯನ್ನು ಯಶಸ್ವಿಯಾಗಿ ಮುನ್ನಡೆಸುತ್ತಾ, ಅದರ ಗುಣ ಮಟ್ಟವನ್ನು ಹೆಚ್ಚಿಸುವಲ್ಲಿ ಇವರು ಪ್ರಮುಖ ಪಾತ್ರ ವಹಿಸಿದ್ದಾರೆ.

ನಮ್ಮ ಸಂಘದ ಏಳಿಗೆಗೆ, ಒಗ್ಗಟ್ಟು ಕಾಪಾಡುವ ಜೊತೆಗೆ ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಇನ್ನಷ್ಟು ಪ್ರೋತ್ಸಾಹ ನೀಡಬೇಕು ಮತ್ತು ನಮ್ಮ ಸಮಾಜ ಬಾಂಧವರು ಸಂಘದಲ್ಲಿ ಇನ್ನಷ್ಟು ಪಾಲ್ಗೊಳ್ಳುವಂತೆ ಅವರಿಗೆ ಪ್ರೋತ್ಸಾಹ ನೀಡುವ ಅಗತ್ಯವಿದೆ ಎಂದು ಇವರ ಸಲಹೆಗಳಾಗಿವೆ.

ಇವರ ಪತ್ನಿ, ಪತಿಯ ಕಲಾಸಕ್ತಿಗನುಗುಣವಾಗಿ ಸಂಗೀತ, ನೃತ್ಯಕಲೆಯಲ್ಲಿ ಪ್ರತಿಭಾವಂತರಾಗಿರುವ ಶ್ರೀಮತಿ ಉಷಾ ಮೋಹನರಾವ್ ಉಡುಪಿಯ ಸೈಂಟ್ ಸಿಸಿಲಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿದ್ದು ಬಿಡುವಿನ ಸಮಯದಲ್ಲಿ ಸಂಗೀತ ಶಿಕ್ಷಕಿಯಾಗಿಯೂ ಸಕ್ರಿಯರಾಗಿದ್ದಾರೆ. ಇವರಿಗೆ ಪುತ್ರರಿಬ್ಬರು. ದೀಪಕ್ ಇಂಜಿನಿಯರಿಂಗ್ ಪದವಿ ಪಡೆದು ಸಿಂಗಾಪುರ ಇಲ್ಲಿ ಉದ್ಯೋಗಿಯಾಗಿದ್ದು, ತನ್ನ ಪತ್ನಿ ಶ್ರೀಮತಿ ಪ್ರಿಯಾದೀಪಕ್ ರಾವ್ ಇವರೊಂದಿಗೆ ನೆಲೆಸಿದ್ದಾರೆ. ಧೀರಜ್ ಇಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವೀಧರರಾದ್ದು ಬೆಂಗಳೂರಿನಲ್ಲಿ ಉದ್ಯೋಗದಲ್ಲಿದ್ದಾರೆ.

ಸಂಪರ್ಕ :

ಆಧಾರ : **ಶ್ರೀಶಾರದಾ ವಿಶೇಷ ಸಂಚಿಕೆ 2010**
**ನಿರ್ದೇಶಕರ ಪರಿಚಯ-ಡಾ| ವೈ.ರವೀಂದ್ರನಾಥ ರಾವ್**

# ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವರಿಗೆ ದೃಢಕಲಶಾಭಿಷೇಕ

ಪಡುಬಿದ್ರಿ ಪಾದೆಬೆಟ್ಟು ಶರ್ಮರ ಕುಟುಂಬಸ್ಥರು ಆರಾಧಿಸಿಕೊಂಡು ಬರುತ್ತಿರುವ ಸುಮಾರು 700 ವರ್ಷದಷ್ಟು ಪುರಾತನವಾದ ಶ್ರೀ ವಿಷ್ಣುಮೂರ್ತಿ ದೇವರಿಗೆ ಎಪ್ರಿಲ್ 26 ರಂದು ಬ್ರಹ್ಮ ಕುಂಬಾಭಿಷೇಕವು ಕುಟುಂಬದ ಹಿರಿಯರಾದ ಶ್ರೀ ಕೋರೆಗಾವ್ ಸುಬ್ಬರಾವ್ ಮತ್ತು ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇದರ ಕಾರ್ಯದರ್ಶಿ ಹಾಗೂ ಸ್ಥಾನಿಕ ಸಮಾಜದ ಹಿತಚಿಂತಕರಾದ ಶ್ರೀ ಕರುಣಾಕರ ಬೆಳ್ಳೆಯವರ ಮಾರ್ಗದರ್ಶನದಲ್ಲಿ ನಾಲ್ಕು ದಿನ ವಿಜೃಂಭಣೆಯಿಂದ ನಡೆದಿದ್ದು, ಇದರ ಮತ್ತೊಂದು ಕಾರ್ಯಕ್ರಮವಾದ ದೃಢ ಕಲಶಾಭಿಷೇಕವು ತಾರಿಕು 13-06-2012ರಂದು ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಜರಗಿತು.

ಈ ಸಂದರ್ಭದಲ್ಲಿ ಊರಿನ ದಾನಿಗಳಾದ ಶ್ರೀಮತಿ ಮತ್ತು ಶ್ರೀ ವಿಶ್ವನಾಥ ಶೆಟ್ಟಿಯವರು ಸುಮಾರು ಮೂರು ಲಕ್ಷ ರೂಪಾಯಿ ವೆಚ್ಚದ ರಜತ ಕವಚ ಮತ್ತು ಸ್ವರ್ಣದೃಷ್ಟಿಯನ್ನು ದೇವರಿಗೆ ಅರ್ಪಿಸಿದರು. ಮಧ್ಯಾಹ್ನ ಹೂವಿನ ಪೂಜೆ-ಅನ್ನಸಂತರ್ಪಣೆ ಜರಗಿತು.

**-ಶ್ರೀನಿವಾಸ ಶರ್ಮ, ಪಾದೆಬೆಟ್ಟು**

## ರಕ್ತದಾನ ಶಿಬಿರ

ನಮ್ಮ ಫ್ರೆಂಡ್ಸ್ ಗ್ರೂಪ್ ಉಡುಪಿ ವತಿಯಿಂದ ಈ ವರ್ಷ ರಕ್ತದಾನ ಶಿಬಿರವನ್ನು ಇದೇ ತಾರೀಕು 14-10-2012ರ ಆದಿತ್ಯವಾರ ಮಣಿಪಾಲ ಆಸ್ಪತ್ರೆಯಲ್ಲಿ ಆಯೋಜಿಸಲಾಗಿದೆ. ಆಸಕ್ತ ರಕ್ತದಾನ ಮಾಡಲು ಇಚ್ಛಿಸುವವರು ಹೆಚ್ಚಿನ ವಿವರಗಳಿಗೆ **ಶ್ರೀಯುತ ವಸಂತ ರಾವ್ ಕರಂಬಳ್ಳಿ ಇವರನ್ನು ಸಂಪರ್ಕಿಸಬಹುದು.**

**ಸಮಯ : ಬೆಳಿಗ್ಗೆ ರಿಂದ ಸಾಯಂಕಾಲ**
**ಸಂಪರ್ಕಿಸ ಬಹುದಾದ**

**-ವಸಂತ ಕೆ.ರಾವ್, ಕರಂಬಳ್ಳಿ**

# ಶಿಕ್ಷಣ-ಮಗುವಿನ ಹಕ್ಕು

ವೈ. ಭುವನೇಂದ್ರ ರಾವ್
ಬಿ.ಟೆಕ್.ಎಡ್, ಎಂ.ಎ



ಎಲ್ಲೂರು ಶ್ರೀ ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮತ್ತು ಗಿರಿಜಮ್ಮ ಇವರ ಪುತ್ರರಾದ ಶ್ರೀ ವೈ. ಭುವನೇಂದ್ರ ರಾವ್ ಸೈಂಟ್ ಮೇರೀಸ್ ಪದವಿಪೂರ್ವ ಕಾಲೇಜು, ಶಿರ್ವದಲ್ಲಿ 35 ವರ್ಷಗಳ ಕಾಲ ಶಿಕ್ಷಕರಾಗಿ ದುಡಿದು ನಿವೃತ್ತಿ ಹೊಂದಿದ್ದಾರೆ. ನಾರಾಯಣಗುರು ಆಂಗ್ಲ ಪ್ರೌಢಶಾಲೆ, ಪಡುಬೆಳ್ಳೆಯಲ್ಲಿ ಒಂದು ವರ್ಷ ಮುಖ್ಯ ಶಿಕ್ಷಕರಾಗಿ ದುಡಿದಿದ್ದಾರೆ. ಇಂದ್ರಾಳಿ ಆಂಗ್ಲ ಮಾಧ್ಯಮ ಪ್ರೌಢಶಾಲೆ ಇಲ್ಲಿ 5 ವರ್ಷಗಳ ಕಾಲ ಮುಖ್ಯ ಶಿಕ್ಷಕರಾಗಿ ಕಾರ್ಯನಿರ್ವಹಿಸಿದ್ದರು. ಯೋಗ ಶಿಕ್ಷಕರಾಗಿ, ಸಂಪನ್ಮೂಲ ವ್ಯಕ್ತಿಯಾಗಿ, ಉಡುಪಿ ಜಿಲ್ಲಾ ಗಣಿತ-ವಿಜ್ಞಾನ ವೇದಿಕೆಯ ಕಾರ್ಯದರ್ಶಿ ಯಾಗಿದ್ದಾರೆ. ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ಪಡೆದಿದ್ದಾರೆ. ರಾಜ್ಯಮಟ್ಟದ ಉತ್ತಮ ವಿಜ್ಞಾನ ಮಾರ್ಗದರ್ಶಕರಾಗಿದ್ದಾರೆ. ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಕುಂಜಿಬೆಟ್ಟುವಿನ ಕಾರ್ಯದರ್ಶಿಯಾಗಿದ್ದರು.

ಮಾನವ ಬುದ್ಧಿ ಜೀವಿ ಮತ್ತು ಸಂಘ ಜೀವಿ. ಆತ ಎಲ್ಲಾ ಜೀವಿಗಳಿಗಿಂತಲೂ ಶ್ರೇಷ್ಠ ಎಂಬ ಹೆಗ್ಗಳಿಕೆ ಪಡೆದಿದ್ದಾನೆ. ಈ ಶ್ರೇಷ್ಠತೆ ಕೇವಲ ಆತನ ರೂಪ,ಬಣ್ಣ,ನಿಲುವು ದೈಹಿಕ ಶಕ್ತಿ, ಸಾಮಾರ್ಥ್ಯ ಇತ್ಯಾದಿಗಳಿಂದ ಬಂದುದಲ್ಲ. ಇದು ಆತನ ಬೌದ್ಧಿಕ ಸಾಮರ್ಥ್ಯದಿಂದ ಬಂದಿದೆ. ಆತನ ಆಲೋಚನಾ ಶಕ್ತಿ, ಕ್ರೀಯಾಶೀಲತೆ, ಬುದ್ಧಿ ಶಕ್ತಿ, ಚಿಂತನ ಶೀಲತೆ, ತಾರ್ಕಿಕ ಗುಣ ಭಾವನಾತ್ಮಕ ಸ್ಪಂದನ, ಜೀವನ ಮೌಲ್ಯಗಳ ಅಳವಡಿಕೆ ಮತ್ತು ತಾನು ಅನುಸರಿಸುವ ತತ್ವಾದರ್ಶಗಳು ಆತನಲ್ಲಿ ಶ್ರೇಷ್ಠತೆಯನ್ನು ತಂದಿದೆ. ಸೂಕ್ತ ತರಬೇತಿ ಮತ್ತು ಮಾರ್ಗದರ್ಶನಗಳ ಮೂಲಕ ಆತನಲ್ಲಿ ಆಂತರಿಕವಾಗಿ ಹುದುಗಿರುವ ಇಂತಹ ನೂರಾರು ಗುಣವಿಶೇಷಗಳನ್ನು, ಶಕ್ತಿ ಸಾಮರ್ಥ್ಯಗಳನ್ನು, ಸೂಕ್ತ ಪ್ರತಿಭೆಗಳನ್ನು ಗುರುತಿಸಿ, ಆತನ ಅರಿವಿಗೆ ಬರುವಂತೆ ಮಾಡಿ ಅವುಗಳನ್ನು ಬೆಳೆಸುವುದೇ ಶಿಕ್ಷಣದ ಗುರಿಯಾಗಿದೆ. ಶಿಕ್ಷಣವು ಮಗುವಿನಲ್ಲಿ ಸತ್ಯ, ಧರ್ಮ,ನ್ಯಾಯ,ಸಹಕಾರ,ಸ್ನೇಹಪರತೆ, ಪರೋಪಕಾರ, ತ್ಯಾಗ,ಕರುಣೆ,ಪ್ರೀತಿ, ವಾತ್ಸಲ್ಯ ಇತ್ಯಾದಿ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಸಹಕಾರಿಯಾಗಿದೆ. ಈ ಮೌಲ್ಯಗಳು ಆತನಿಗೆ ಇತರ ಪ್ರಾಣಿಗಿಂತಲೂ ಹೆಚ್ಚಿನ ಘನತೆ, ಶ್ರೇಷ್ಠತೆ ಮತ್ತು ಧನ್ಯತೆಗಳನ್ನು ತಂದಿವೆ. ಶಿಕ್ಷಣವು ಆತನ ಅಂತರಂಗದಲ್ಲಿ ಸಂಸ್ಕಾರದ ಬೀಜ ಬಿತ್ತಿ ಬಾಳಿನಲ್ಲಿ ಪರಿಪೂರ್ಣತೆಯನ್ನು ಪಡೆಯಲು ಸಹಕಾರಿಯಾದ ಏಕೈಕ ಸಾಧನವಾಗಿದೆ.

ಮಗು ಸಮಾಜದ ಅವಿಭಾಜ್ಯ ಅಂಗವಾಗಿದೆ. ಸಮಾಜ ಸಂಬಂಧಗಳ ಜೇನುಗೂಡು ಆಗಿದೆ. ನಾಗರೀಕತೆ ಮತ್ತು ಸಂಸ್ಕೃತಿಗಳ ಪ್ರತೀಕವಾಗಿದೆ. ಮಾನವನ ತಿಳುವಳಿಕೆ ಹೆಚ್ಚಿದಂತೆ ಮತ್ತು ಆತ ಸುಶಿಕ್ಷಿತನಾದಂತೆ ಸಮಾಜಕ್ಕೆ ಆತನ ಕೊಡುಗೆ ಹೆಚ್ಚುತ್ತಾ ಹೋಗುತ್ತದೆ. ಇಂತಹ ಸಮಾಜದಲ್ಲಿ ಬೆಳೆವ ಮಗುವು ಸಾಮಾಜಿಕ ಕಟ್ಟುಕಟ್ಟಳೆ ಮತ್ತು ರೀತಿ ರಿವಾಜುಗಳನ್ನು ಕಲಿಯಬೇಕಾಗುತ್ತದೆ. ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಗಳನ್ನು ತಿಳಿದು ಆಚರಿಸಬೇಕಾಗುತ್ತದೆ. ಸಮಾಜದ ಮುಂದಾಳತ್ವವನ್ನು ವಹಿಸಿ ಪರಂಪರೆಯನ್ನು ಉಳಿಸಿ,ಬೆಳೆಸಿ ಮುನ್ನಡೆಸುವಂತಹ ಘನ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗುತ್ತದೆ. ಸೈದ್ಧಾಂತಿಕ ನೆಲೆಯಲ್ಲಿ ಮತ್ತು ಸಾಮಾಜಿಕ ಅವಶ್ಯಕತೆಯ ಆಧಾರದಲ್ಲಿ ಸಿದ್ಧಪಡಿಸಿದ ಶೈಕ್ಷಣಿಕ ಪಠ್ಯ ಕ್ರಮಗಳು ಮಾತ್ರ ಇಂತಹ ಸಮಾಜವನ್ನು ಸೃಷ್ಟಿಸಲು ಸಾಧ್ಯವಿದೆ ಎಂದು ಸ್ಪಷ್ಟವಾಗುತ್ತದೆ.

ಮಗು ಯಾವುದೇ ಸಮಾಜದ ಅನರ್ಘ್ಯ ಆಸ್ತಿ. ಪ್ರತಿಯೊಂದು ಮಗುವೂ ಒಂದಲ್ಲ ಒಂದು ರೀತಿಯಲ್ಲಿ ಸಮಾಜದ ಪ್ರತಿನಿಧಿಯಾಗಿರುತ್ತದೆ. ಒಂದು ಸಮಾಜದ ಏಳಿಗೆ ಮಗುವಿನ ಪರಿಪೂರ್ಣ ವ್ಯಕ್ತಿತ್ವದ ವಿಕಸನ ಮತ್ತು ಬೌದ್ಧಿಕ ಚಿಂತನೆಯನ್ನು ಅವಲಂಬಿಸಿದೆ. ಶಿಕ್ಷಣವು ಸಮಾಜದ ಧಾರ್ಮಿಕ,ಆರ್ಥಿಕ, ರಾಜಕೀಯ ಮುಂತಾದ ಎಲ್ಲಾ ಕ್ಷೇತ್ರಗಳ ಬೆಳವಣಿಗೆಗೆ ಕಾರಣವಾಗಿದೆ. ಮಗುವು ಸಮಾಜದ ಬೀಜರೂಪವಾಗಿದೆ. ಮಗು ಎಂಬ ಬೀಜವನ್ನು ಬಿತ್ತನೆ ಮಾಡಿ, ಮೊಳಕೆ ಬರಿಸಿ, ಸೂಕ್ತ ರಕ್ಷಣೆ ನೀಡಿ, ಪೋಷಿಸಿ,ಹೆಮ್ಮರವಾಗಿ ಬೆಳೆಸಿ ಅದರಿಂದ ಸ್ವಾದಿಷ್ಟ ಫಲಗಳನ್ನು ಪಡೆಯುವಂತೆ ಮಾಡುವುದು ಸಮಾಜದ ಕರ್ತವ್ಯವಾಗಿರುತ್ತದೆ. ಸಾವಿರಾರು ವರ್ಷಗಳಿಂದ ಅನುಸರಿಸಿಕೊಂಡು ಬಂದ ಪರಂಪರೆಯನ್ನು ಉಳಿಸಿ ಬೆಳೆಸುವುದು ಅನಿವಾರ್ಯವಾಗಿದೆ. ಸೂಕ್ತ ರೀತಿಯಲ್ಲಿ ರೂಪಿಸಿದ ಶೈಕ್ಷಣಿಕ ವ್ಯವಸ್ಥೆಯಿಂದ ಮಾತ್ರ ಇಂತಹ ಸುಶಿಕ್ಷಿತ, ಆರೋಗ್ಯ ಪೂರ್ಣ ಮತ್ತು ಸುಸಂಸ್ಕೃತ ಮಕ್ಕಳನ್ನು ರೂಪಿಸಿ ಭವಿಷ್ಯದ ಆದರ್ಶ ಸಮಾಜವನ್ನು ಕಟ್ಟಲು ಸಾಧ್ಯ. ಇದರಿಂದ ''ಇಂದಿನ ಮಕ್ಕಳೇ ಮುಂದಿನ ಜನಾಂಗ'' ಎಂದು ಖಚಿತವಾಗುವುದು.

ಹೇಗೆ ಪ್ರತಿಯೊಂದು ಮಗುವಿಗೆ ಶಿಕ್ಷಣ ನೀಡುವುದು ಸಮಾಜದ ಕರ್ತವ್ಯವಾಗಿದೆಯೋ ಅದೇ ರೀತಿಯಲ್ಲಿ ಶಿಕ್ಷಣ ಪಡೆಯುವುದು ಮಗುವಿನ ಹಕ್ಕು ಆಗಿರುತ್ತದೆ. ಪ್ರತಿಯೊಂದು ದೇಶದಲ್ಲಿಯೂ, ಎಲ್ಲಾ ಕಾಲದಲ್ಲಿಯೂ ಸುಸಂಸ್ಕೃತ ಸಮಾಜದ ಸೃಷ್ಟಿಯ ಪ್ರಯತ್ನ ಸಾಗುತ್ತಲೇ ಬಂದಿದೆ. ಅವೈಜ್ಞಾನಿಕ ಆಚರಣೆಗಳು, ಸೈದ್ಧಾಂತಿಕ ನೆಲೆಯಿಲ್ಲದ ಕಟ್ಟುಕಟ್ಟಳೆಗಳು, ಅತಾರ್ಕಿಕ ಸಂಪ್ರದಾಯಗಳು ಮತ್ತು ಮೂಢನಂಬಿಕೆಗಳು ಜನರ ಜೀವನವನ್ನು ಅಧೋಗತಿಗೆ ತಳ್ಳಿದೆ. ಅಂಧಶ್ರದ್ದೆಗಳಿಂದ ಕೂಡಿದ ಇಂತಹ ಸಮಾಜವನ್ನು ಆರೋಗ್ಯ ಪೂರ್ಣ ಸಮಾಜವನ್ನಾಗಿ ಪರಿವರ್ತಿಸಲು ಸಮಾಜದ ಜೀವನಾಡಿಯಾಗಿರುವ ಮುಖವು ಸೂಕ್ತ ಶಿಕ್ಷಣವನ್ನು ''ಹಕ್ಕಿನಿಂದ'' ಪಡೆಯುವುದು ಅನಿವಾರ್ಯವಾಗುತ್ತದೆ. ವಿಷದ ಬೀಜದ ಬಿತ್ತನೆಯಿಂದ ಎಂದಿಗೂ ಅಮೃತ ಸಮಾನ ಫಲವನ್ನು ಪಡೆಯಲು ಸಾಧ್ಯವಿಲ್ಲ ಅದೇ ರೀತಿಯಲ್ಲಿ ಪ್ರಜ್ಞಾವಂತರಲ್ಲದ ಜನರಿಂದ ಸಮಾಜದ ಏಳಿಗೆಯನ್ನು ಪಡೆಯಲು ಸಾಧ್ಯವಿಲ್ಲ. ಪ್ರಜ್ಞಾವಂತ ಪ್ರಜೆಯನ್ನು ಬಯಸುವ ಸಮಾಜ ಅದರ ಎಲ್ಲಾ ಮಕ್ಕಳಿಗೆ ಯೋಗ್ಯ ಶಿಕ್ಷಣ ನೀಡುವುದು ಅದರ

# 'ಚಾಟಿ - ಚಟಾಕಿ'-3

- ಮಾರ್ಪಳ್ಳಿ ಆರ್ ಮಂಜುನಾಥ್



''ಬಾರೋ ಇಲ್ಲಿ, ನೋಡಿದಿಯಾ ಪಕ್ಕದ ಮನೆ ಶಾಂತಕ್ಕನ ಮಗನನ್ನ ಅವನು ಎಸ್ಎಸ್ಎಲ್ಸಿ ಯಲ್ಲಿ 95% ಮಾರ್ಕ್ಸ್ ತೆಗೆದುಕೊಂಡು ಡಿಸ್ಟಿಂಗ್‌ಷನ್‌ನಲ್ಲಿ ಪಾಸಾಗಿದ್ದಾನೆ. ನೀನಿದ್ದೀಯಾ? ಬರೀ ಸೋಮಾರಿ. ಮೂರು ಹೊತ್ತು ಆಟ ಆಡ್ಕೊಂಡು ಕಾಲ ಕಳಿತಿದ್ದೀಯಾ? ಥರ್ಡ್ ಕ್ಲಾಸ್‌ನಲ್ಲಿ ನೀನು ಪಾಸಾಗಿದೀಯಾ?''

ಇನ್ನೊಂದು ಮನೆಯಲ್ಲಿನ ಕಥೆ. ''ಅಲ್ವೇ ಪುಟ್ಟಿ, ನಿನ್ನ ಗೆಳತಿ ರಮಾ ಎಷ್ಟು ಚೆನ್ನಾಗಿ ಭರತನಾಟ್ಯ ಮಾಡ್ತಾಳೆ ? ನಿನಗೇನು ರೋಗ ಬಂದಿದೆಯೇ?''

ಮತ್ತೊಂದು ಮನೆಯಲ್ಲಿನ ದೃಶ್ಯ. ''ಅಲ್ವೋ ಪಮ್ಮು, ಯಾವಾಗಲು ಓದ್ತಾ ಇರ್ತಿಯಲ್ಲೋ. ನಿನ್ನ ಫ್ರೆಂಡ್ ಕಾರ್ತಿಕ್ ಕ್ರಿಕೆಟ್‌ನಲ್ಲಿ ಅಂತರ್‌ರಾಜ್ಯ ಮಟ್ಟಕ್ಕೆ ಸೆಲೆಕ್ಟ್ ಆಗಿದ್ದಾನೆ. ನೀನಂತೂ ಪುಸ್ತಕದ ಹುಳು.''

ಎಲ್ಲಿ ನೋಡಿದರೂ ತಮ್ಮ ಮಕ್ಕಳನ್ನು ಇನ್ನೊಬ್ಬ ಮಕ್ಕಳೊಂದಿಗೆ ಹೋಲಿಸಿ, ಅವರಲ್ಲಿ ಇರುವ ಗುಣ-ಬುದ್ಧಿವಂತಿಕೆ ತಮ್ಮ ಮಕ್ಕಳಲ್ಲಿ ಇಲ್ಲವಲ್ಲ ಎನ್ನುವ ಕೊರಗು. ಅಸಹನೆ, ಬೈಯ್ಗುಳ. ಆದರೆ ತಮ್ಮ ಮಕ್ಕಳಲ್ಲಿ ಯಾವ ಬುದ್ಧಿವಂತಿಕೆ, ಜ್ಞಾನ ಇದೆಯೋ ಅದನ್ನು ಉತ್ತೇಜಿಸುವ ಮನಸ್ಸು ಗ್ರಹಿಕೆ ಇಲ್ಲದಿರುವುದು ಇಂದಿನ ಎಲ್ಲ ತಂದೆ-ತಾಯಿಗಳ, ಪೋಷಕರ ಮನೋಸ್ಥಿತಿ.

ಅವರ ಮಗ/ಮಗಳು ಡಾಕ್ಟರ್ ಕಲಿತಿದ್ದಾಳೆ. ಇಂಜಿನಿಯರಿಂಗ್ ಓದ್ತಾ ಇದ್ದಾರೆ, ನಮ್ಮ ಮಗ ಆರ್ಡಿನರಿ ಬಿ.ಎ,, ಬಿ.ಎಸ್ಸಿ,, ಬಿಕಾಂ ಎನ್ನುವ ಸಂಕುಚಿತ ಭಾವ, ಕೀಳರಿಮೆ ಸೃಷ್ಠಿಸಿಕೊಳ್ಳುವ ಅಸಹಜ ಸ್ಥಿತಿ.

ಮಕ್ಕಳ ಏಳಿಗೆಯ ಬಗ್ಗೆ ಹಿರಿಯರು ಯೋಚಿಸಬೇಕಾದ್ದು ಅವರ ಕರ್ತವ್ಯ, ಜವಾಬ್ದಾರಿಯೇ. ಆದರೆ ಬೇರೆ ಮಕ್ಕಳ ಜೊತೆಗೆ ಹೋಲಿಕೆ ಮಾಡಿ ಜರಿಯುವುದು ಎಷ್ಟರಮಟ್ಟಿಗೆ ಸರಿ ಎನ್ನುವ ಪ್ರಶ್ನೆಯೂ ಅಷ್ಟೆ ಪ್ರಧಾನವೂ ಹೌದು.

ಈ ಸಮಾಜದಲ್ಲಿ ಡಾಕ್ಟರ್, ಇಂಜಿನಿಯರ್, ಸರ್ಕಾರಿ ನೌಕರರು, ಕ್ರೀಡಾಪಟುಗಳು, ಕಲಾವಿದರು, ಕವಿಗಳು, ರಾಜಕಾರಣಿಗಳು ಹೀಗೆ ಅನೇಕಾನೇಕ ವೃತ್ತಿಗಳು, ಸೇವಾ ಕೆಲಸಗಳು, ದುಡಿಮೆಗಳಿಗೆ ದಾರಿಗಳು ಇವೆ. ಒಂದೇ ಮಾರ್ಗ ಎನ್ನುವುದೇನಿಲ್ಲ, ತಮ್ಮ ಮಕ್ಕಳಿಗೆ ಯಾವುದು ಒಗ್ಗುತ್ತದೆಯೋ, ಅವರುಗಳ ಜ್ಞಾನಕ್ಕೆ, ಬುದ್ಧಿಶಕ್ತಿಗೆ ತಕ್ಕನಾಗಿದೆಯೋ ಆ ದಾರಿಯಲ್ಲಿ ಮಕ್ಕಳನ್ನು ಮುನ್ನಡೆಸುವುದು ಆ ಹಿರಿಯರ ಕರ್ತವ್ಯ, ಜವಾಬ್ದಾರಿ ಎಂದರೆ ತಪ್ಪಲ್ಲ.

ನಮ್ಮ ಕಣ್ಮುಂದೆಯೇ ಕೆಲವು ಚಿತ್ರಗಳು ಇವೆ. ತಂದೆ ಬಬ್ಬ ಹೆಸರಾಂತ ವೈದ್ಯ. ಅವರ ಮಗ ಪ್ರಖ್ಯಾತ ವಕೀಲ. ತಂದೆ ದೊಡ್ಡ ರಾಜಕಾರಣಿ, ಮಗ ದೊಡ್ಡ ನಟ, ಕಲಾವಿದ. ತಂದೆ-ತಾಯಿಗಳು ಕಾಲೇಜಿನಲ್ಲಿ ಪ್ರೊಫೆಸರ್, ಮಗಳು ಕೈಗಾರಿಕೋದ್ಯಮಿ, ನೂರಾರು ಭಿನ್ನ ಭಿನ್ನ ವೃತ್ತಿ-ವಿಭಿನ್ನ ಮನೋಭಾವಗಳು. ತಂದೆ ತಾಯಿಗಳಂತೆ ಮಕ್ಕಳ ವೃತ್ತಿ ಸಾಗಬೇಕೆಂದಿಲ್ಲ. ಚಾಣಕ್ಯ ತನ್ನ ನೀತಿ ಸಂಹಿತೆಯಲ್ಲಿ ಹೀಗೆ ಹೇಳುತ್ತಾನೆ.

ಪುತ್ರಾಶ್ಚ ವಿವಿಧೈಃ ಶೀಲೈರ್ನಿಯೋಜ್ಯಾಃ ಸತತಂ ಬುಧೈಃ ।

ನೀತಿಜ್ಞಾಃ ಶೀಲ ಸಂಪನ್ನಾ ಭವಂತಿ ಕುಲಪೂಜಿತಾಃ ॥

ಅಂದರೆ, ಜಾಣರಾದವರು ತಮ್ಮ ಪುತ್ರರನ್ನು ಬುದ್ಧಿವಂತರನ್ನಾಗಿಯೂ, ಸಂಸ್ಕಾರವಂತರನ್ನಾಗಿಯೂ ಬೆಳೆಸಬೇಕು. ಸಮಾಜವು ಸುಶಿಕ್ಷಿತರನ್ನು, ಬುದ್ಧಿವಂತರನ್ನು ಸದಾ ಗೌರವಿಸುತ್ತದೆ.

ಇಲ್ಲಿ ನಾವು ಬಹು ಮುಖ್ಯವಾಗಿ ಗಮನಿಸಬೇಕಾದದ್ದು-ನಮ್ಮ ಮಕ್ಕಳನ್ನು ಬಬ್ಬ ಉತ್ತಮ ನಾಗರಿಕನನ್ನಾಗಿ ರೂಪಿಸಬೇಕು. ಆತನ ವೃತ್ತಿ ಯಾವುದೇ ಇರಲಿ, ಹಾಡುಗಾರನಾಗಿರಲಿ, ಲೇಖಕನಾಗಿರಲಿ, ಕ್ರೀಡಾಪಟುವಾಗಿರಲಿ ಅಥವಾ ಯಾವುದೇ ಅಧಿಕಾರಿಯಾಗಿರಲಿ, ಆತ /ಆಕೆ ಸಮಾಜಕ್ಕೆ ಒಂದು ಆಸ್ತಿಯಾಗಬೇಕೆ ಹೊರತು ಸಮಾಜಕ್ಕೆ ಕಂಟಕನಾಗಿರಬಾರದು. ''ಏನೇ ಆಗಿರು-ಮೊದಲು ಮಾನವನಾಗಿರು.''

ಇಂಗ್ಲೀಷಿನ ಒಂದು ನಾಣ್ಣುಡಿಯೊಂದು ಇಲ್ಲಿ ನೆನಪಾಗುತ್ತದೆ.

"

ಎಷ್ಟೊಂದು ಅರ್ಥಗರ್ಭಿತ. ಇದೊಂದು ಜ್ಞಾನದ ಕೊಂಡಿ. ನಿರಂತರ ಸಾಗುವ ನಾಗರಿಕ-ಜ್ಞಾನವಾಹಿನಿ.

ಮಕ್ಕಳನ್ನು ಬೆಳೆಸುವುದು ಒಂದು ಕಲೆಯೇ, ಜಾಣ್ಮೆಯೇ. ವಿಭಿನ್ನವಾದ ಮಕ್ಕಳ ಮನೋಭಾವ, ಆಸಕ್ತಿ ಅಭಿರುಚಿಗಳು. ಮನೆಯೊಂದೇ ಅವರ ಬೆಳವಣಿಗೆಯ ಮಜಲೇನಲ್ಲ, ಹೊರ ಪ್ರಪಂಚವೂ ಇದೆ. ಸ್ನೇಹಿತರಿದ್ದಾರೆ, ಟಿ.ವಿ/ಸಿನಿಇಮಾ ಮಾಧ್ಯಮಗಳಿವೆ.

ಈ ಮಧ್ಯದಲ್ಲಿ ಮಕ್ಕಳನ್ನು ಸರಿದಾರಿಯಲ್ಲಿ ತರುವ, ನಡೆಸುವ ತಂದೆ-ತಾಯಿಗಳ ಪಾತ್ರದ ನಿರ್ವಹಣೆಯು ಕಷ್ಟಕರವೇ. ಎಲ್ಲ ತಪ್ಪುಗಳನ್ನು ಪೋಷಕರ ಮೇಲೆ ಹಾಕುವಂತಿಲ್ಲ. ಒಂದೇ ಮನೆಯಲ್ಲಿ ಬೆಳೆದ, ನೋಡಿದ ಘಟನೆಗಳನ್ನು ಮಕ್ಕಳು ಹೇಗೆ ತೆಗೆದುಕೊಳ್ಳುತ್ತಾರೆ ಎಂಬ ಬಗ್ಗೆ ಒಂದೇ ಜೋಕು ನಿಮಗಾಗಿ ಇಲ್ಲಿದೆ.

ಒಂದು ಕುಡುಕನ ಮನೆ. ದಿನವಿಡೀ ಕುಡಿದು ಮನೆಗೆ ಬಂದು ರಂಪಾ ಎಬ್ಬಿಸಿ ಹೆಂಡತಿಗೆ ಬಡಿಯುವ, ಬೈಯುವ ಗಂಡ, ಮನೆಯಲ್ಲಿ ಅವನಿಗೆ ಎರಡು ಮಕ್ಕಳು. ಅಪ್ಪನ ಕುಡಿತ, ಅವಾಚ್ಯ ಮಾತುಗಳು, ತಾಯಿಗೆ ಹೊಡೆತ, ದಿನವಿಡಿ ನೋಡುವ ಪರಿ, ದೃಶ್ಯ ತಾಯಿಯ ಅಳಲು-ಆರ್ತತೆ, ಮನೆಯೇ ನರಕ.

ಇದ್ದಕ್ಕಿದ್ದಂತೆ ಒಂದು ದಿನ ತಂದೆ ತೀರಿಕೊಂಡ. ತಾಯಿಯ ಹೆಗಲ ಮೇಲೆ ಸಂಸಾರ ಭಾರ, ಬೆಳೆದು ದೊಡ್ಡವರಾದ ಎರಡು ಮಕ್ಕಳಲ್ಲಿ ಬಬ್ಬ ತಂದೆಯಂತೆ ಭಾರೀ ಕುಡುಕ. ತಂದೆಯ ಕುಡಿತದ ಪ್ರಭಾವ. ಅವನ ಕೂಗಾಟ - ಕಿರಿಚಾಟ ಅವನ ಮೇಲೆ ಪರಿಣಾಮ, ಅದೇ ಅವನಿಗೆ ಸರಿದಾರಿ ಎನಿಸಿದೆ.

ಇನ್ನೊಬ್ಬ ಮಗನಿಗೆ ತಂದೆಯ ಕುಡಿತ ಅಸಹ್ಯ. ತಾಯಿಯ ಸಂಕಟ ಅವನಿಗೆ ಕಣ್ಣೀರು. ಇದು ಒಂದು ಬದುಕೇ ಎನಿಸಿ, ಕುಡಿತದ ವಿರುದ್ಧವೇ ಅವನ ಹೋರಾಟ, ಪಾನ ವಿರೋಧಿ ಕುಡಿತದಿಂದ ಸಂಸಾರಗಳು ಹೇಗೆ ಬೀದಿ ಪಾಲು ಎನ್ನುವ ಬಗ್ಗೆ ಅವನ ಬದುಕು ಮೀಸಲು.

ಹೀಗೆ ಮಕ್ಕಳ ಮೇಲೆ ಬೀರುವ ಪರಿಣಾಮ, ತೆಗೆದುಕೊಳ್ಳುವ ನಿರ್ಧಾರ ಕೆಲವೊಮ್ಮೆ ನಮ್ಮನ್ನು ಅವಲಂಬಿಸದೇ ಹೋಗಬಹುದು. ಆದರೂ ಮಕ್ಕಳ ಮನಸ್ಸು ಹೂವಿನಷ್ಟೆ ಕೋಮಲ, ಮೃದು, ಮೃದು ಎರೆಮಣ್ಣಿನಂತೆ, ಹೇಗೆ ಬೇಕಾದರೂ ಅವರನ್ನು ರೂಪಿಸಬಹುದು.

ಸರಿತಪ್ಪುಗಳನ್ನು ಎಚ್ಚರಿಕೆಯಿಂದ ಗಮನಿಸಿ, ತಿದ್ದಿ ನಡೆಸುವ ಕಾರ್ಯ ಹಿರಿಯರದೇ. ನಮ್ಮ ಮಕ್ಕಳನ್ನು ಇನ್ನೊಬ್ಬ ಮಕ್ಕಳೊಂದಿಗೆ ಹೋಲಿಸುವುದು ಬೇಡ, ಆದರೆ ಮಕ್ಕಳ ಸಾಧನೆ, ಬುದ್ಧಿವಂತಿಕೆಯ ಅರಿವು ನಮ್ಮ ಮಕ್ಕಳ ಮನಸ್ಸಿಗೆ ಮುಟ್ಟಿಸುವ ಜಾಣ್ಮೆಯ ಹದವೂ - ನಮ್ಮ ಮೇಲಿದೆ.

ಜೀಜಾಬಾಯಿ, ರಾಮಾಯಣದ, ಮಹಾಭಾರತದ ಕತೆಯನ್ನು ಶಿವಾಜಿಯ ಮನಕ್ಕೆ ಮುಟ್ಟಿಸದಿದ್ದರೆ ಛತ್ರಪತಿ ಶಿವಾಜಿಯಾಗುತ್ತಿದ್ದನೋ ಇಲ್ಲವೋ. ಇಂತಹ ಎಷ್ಟೊಂದು ತಾಯಿ-ತಂದೆಯರ ಹಿತೋಪದೇಶ-ಪ್ರಯತ್ನಗಳ ಫಲವೇ ಮಹಾತ್ಮರುಗಳ ಉದಯ ಎಂದರೆ ತಪ್ಪಿಲ್ಲ.

ನಮ್ಮ ಮಕ್ಕಳ ದೈಹಿಕ - ಮಾನಸಿಕ-ಶಕ್ತಿಗನುಗುಣವಾಗಿ ಅವರಲ್ಲಿ ಧೈರ್ಯ, ಸ್ವಾಭಿಮಾನ, ಜ್ಞಾನವನ್ನು ಬೆಳೆಸಿ ಉತ್ತಮ ನಾಗರಿಕರನ್ನಾಗಿ ಮಾಡುವ ಹೊಣೆ ನಮ್ಮದು. ಸಸಿಗೆ ಗೊಬ್ಬರ-ನೀರು, ಉತ್ತಮ ಪರಿಸರವನ್ನು ಕಲ್ಪಿಸೋಣಾ. ದೊಡ್ಡವರಾದ ಮೇಲೆ ಉತ್ತಮ ಫಲವನ್ನು ನಮಗಾಗಿ ಅಲ್ಲ-ಸಮಾಜಕ್ಕೆ ಸಿಗಲೆಂದು ಹಾರೈಸೋಣಾ.

# ವೇದಗಣಿತದ ಪರಿಚಯ-2

-ಸಿ.ಎಸ್.ರಾವ್
ವಿಶ್ರಾಂತ ಡಿ.ಜಿ.ಎಮ್., ಕಾರ್ಪೋರೇಶನ್ ಬ್ಯಾಂಕ್



(ಹಿಂದಿನ ಸಂಚಿಕೆಯಿಂದ...)

ಉದಾಹರಣೆ 7:

**1. ಪ್ರಶ್ನೆ:** 26 24
**2. ಪ್ರಶ್ನೆ:** 37 33

ಇಲ್ಲಿ ಕೊನೆಯ ಅಂಕೆ 6+4+10, 7+3=10 ಇಲ್ಲಿ ಗಣಿತವನ್ನು ಹೇಗೆ ಮಾಡಬಹುದು ನೋಡಿ.

**1. ಪ್ರಶ್ನೆ:** 26 24 (6 4=24) (2+1 2=6) 624
**2. ಪ್ರಶ್ನೆ:** 37 33 (7 3=21) (3+1 3=12) 1221
**3. ಪ್ರಶ್ನೆ:** 44 46 (4 6=24) (4+1 4=20) 2024
**4. ಪ್ರಶ್ನೆ:** 42 48 (2 8=16) (4+1 4=20) 2016
**5. ಪ್ರಶ್ನೆ:** 54 56 (4 6=24) (5+1 5=30) 3024
**6. ಪ್ರಶ್ನೆ:** 91 99 (1 9=09)
(ಇಲ್ಲಿ ಎರಡು ಅಂಕೆ ಇದ್ದುದರಿಂದ ಉತ್ತರ ಎರಡು ಅಂಕೆ ಬರಬೇಕು)(9+1 9=90)=9009
**7. ಪ್ರಶ್ನೆ:** 53 57(3 7=21)(5+1 5=30)-3021
**8. ಪ್ರಶ್ನೆ:** 52 58(2 8=16)(5+1 5=30)=3016

ಎರಡನೇ ಸೂತ್ರ-ನಿಖಿಲಂ ನವತಃಚ್ಸರಮಮ್‌ದಶತಃ, निखिलं नवतश्चरम दशतः (

ಇದರಲ್ಲಿ 60 ರಿಂದ 70 ವಿಧಾನಗಳಿವೆ.
(ನಾವು ಒಂದೇ ರೀತಿಯ ಅಂಕೆಗಳಿವೆ ಎಂದು ನೋಡಬೇಕು)

ಉದಾಹರಣೆ 8:

**1. ಪ್ರಶ್ನೆ:** 73 99

ಇಲ್ಲಿ '9' ಇದೆ. ಹೀಗಿದ್ದಲ್ಲಿ ಉತ್ತರ ಬರೆಯಲು ಬಹಳ ಸುಲಭ, ಮೊದಲು ಕಡಿಮೆ ಇದ್ದ ಸಂಖ್ಯೆಯಿಂದ ಒಂದನ್ನು ಕಳೆಯುವುದು (73-1=72). ಅದನ್ನು ಉತ್ತರ ಎಡಬದಿಯಲ್ಲಿ ಬರೆಯುವುದು. ಆಮೇಲೆ ಜಾಸ್ತಿಯಿದ್ದ ಸಂಖ್ಯೆಯಿಂದ ಕಡಿಮೆ ಇದ್ದ ಸಂಖ್ಯೆಯನ್ನು ಕಳೆಯುವುದು (99-73=26). ಅದಕ್ಕೆ ಒಂದನ್ನು ಕೂಡಿಸಿ ಬಲಭಾಗದಲ್ಲಿ ಬರೆಯುವುದು. (26+1)=7227.

**2. ಪ್ರಶ್ನೆ:** 99 20 (20-1=19) (99-20=79+1) 1980
**3. ಪ್ರಶ್ನೆ:** 999 343 (343-1=342) (999-343+1=657) (999-342=657)=342657
**4. ಪ್ರಶ್ನೆ:** 9999 34 (34-1=33) (9999-34(+1)=9966) (9999-33 = 9966)=339966
**5. ಪ್ರಶ್ನೆ:** 1034 9999 (1034-1=1033) (9999-1034(+1)=8966) (9999-1033=8966)=10338966
**6. ಪ್ರಶ್ನೆ:** 999 103 (103-1=102) (999-102=897)=102897
**7. ಪ್ರಶ್ನೆ:** 22 999 (22-1=21) (999-21=978)=21978

ಹಿಂದೆ ಉದಾಹರಣೆ-2 ರಲ್ಲಿ 12345 11ರಿಂದ ಗುಣಿಸುವುದು ಸುಲಭ ದಾರಿಯನ್ನು ಕಂಡುಹಿಡಿದಿದ್ದೇವೆ.

12345 11=135795. ಅದು ಹೇಗೆ ಎಂದರೆ ಮೊದಲಿನ ಸಂಖ್ಯೆಯಾದ 5 ಮೊದಲು ಬರೆಯುವುದು ಆಮೇಲೆ ಮೊದಲಿನ ಒಂದೊಂದೆ ಅಂಕೆಗೆ ಕಂಡಿಸಿ ಕೊಂಡು ಹೋಗುವುದು (5+4+=9, 4+3=7, 3+2=5, 2+1=3, ಮತ್ತು 1)

ಇದೇ ರೀತಿ 12345 111 ರಿಂದ ಗುಣಿಸಿದರೆ ಹೇಗೆ ಮಾಡುವುದು ನೋಡಿ. (ಉತ್ತರ:1370295) ಮೊದಲು 5ನ್ನು ಬರೆಯುವುದು ಆಮೇಲೆ (5+4) 9. ಆಮೇಲೆ (5+4+3=12ರಲ್ಲಿ 2ನ್ನು ಬರೆಯುವುದು). ಆಮೇಲೆ (4+3+2 ಮತ್ತೆ ಹಿಂದಿನ ಶೇಷ 1=10. ಇದರಲ್ಲಿ 0ಯನ್ನು ಬರೆಯುವುದು. 1ನ್ನು ಮುಂದೆ ಕೊಂಡು ಹೋಗುವುದು) 0 ಆಮೇಲೆ (3+2+1 ಮತ್ತೆ ಶೇಷ+1=7ನ್ನು ಬರೆಯುವುದು) 7 ಆ ಮೇಲೆ (2+1=3) 3. ಆಮೇಲೆ 1. ಇಲ್ಲಿ 111 ಇರುವುದರಿಂದ 3 ಅಂಕೆಯ ತನಕ ಕೂಡಿಸಿ ಬರೆಯಬೇಕು.

ಉದಾಹರಣೆ 9:

1ರಿಂ 9 ರವರೆಗಿನ =10, 11ರಿಂದ 99 ವರೆಗಿನ =100, 101 ರಿಂದ 999ರ ವರೆಗಿನ =1000. ಹೀಗೆಯೆ

**1. ಪ್ರಶ್ನೆ:** 93 94 ಈಗ ನಲ್ಲಿ ಹೇಗೆ ಗುಣಿಸಬಹುದು ನೋಡಿ. (100 ರಿಂದ 93 ಹೋದರೆ 7, ಹಾಗೆಯೆ 94 ಹೋದರೆ 6 ಅದನ್ನು ಮೇಲೆ ಬರೆಯಬೇಕು)
ಇನ್ನು 6 7=42. ಇದು ಉತ್ತರದ ಕೊನೆಯ ಸಂಖ್ಯೆ. ಇನ್ನು ಉತ್ತರ ಮೊದಲಿನ ಸಂಖ್ಯೆ ಬರಲು 93-6 ಅನ್ನು ಕಳೆಯಬೇಕು ಇಲ್ಲದಿದ್ದರೆ 94-7ನ್ನು ಕಳೆಯಬೇಕು (6 ಮತ್ತೆ 7 ಮೇಲೆ ಬರೆದ ವಿರೋಧ ಅಂಕೆಗಳು) 94-7=87, ಅಥವಾ 93-6=87

**2. ಪ್ರಶ್ನೆ:** 89 92(100-89=11, 100-92=8) (11 8=88 ಉತ್ತರ ಕೊನೆಯ 2ಸಂಖ್ಯೆ) (89-8 ಅಥವಾ 92-11=81 ಉತ್ತರದ ಮೊದಲ 2 ಸಂಖ್ಯೆ) ಉತ್ತರ 8188

**3. ಪ್ರಶ್ನೆ:** 972 989
28/972 11/989
(28 11=308) (972-11 ಅಥವಾ 989-28=961) ಉತ್ತರ : 961308

**4. ಪ್ರಶ್ನೆ:**
86 81=6966 =14/86 19/81
(14 19=266) (86-19 ಅಥವಾ 81-14=67)


ಇಲ್ಲಿ ಉತ್ತರದ ಮೊದಲಿನ ಸಂಖ್ಯೆ 67. ಇದಕ್ಕೆ ಆಮೇಲಿನ ಸಂಖ್ಯೆ ಎರಡು ಅಂಕೆಯನ್ನು ಬಿಟ್ಟು 66ನ್ನ ಬಿಟ್ಟು 2ನ್ನು ಮೊದಲಿನ ಸಂಖ್ಯೆಗೆ ಸೇರಿಸಬೇಕು ಆಗ ಅದು 67+2=69 ಆಗುತ್ತದೆ. ಮೊದಲಿನ ಸಂಖ್ಯೆಯನ್ನು ಗುಣಿಸಿದಾಗ (14 19)ಅದರ ಉತ್ತರ ಎರಡು ಸಂಖ್ಯೆಗಿಂತ ಜಾಸ್ತಿ ಬಂದರೆ ಮೊದಲಿನ ಸಂಖ್ಯೆಗೆ ಕೂಡಿಸಬೇಕು.

**ತಿಂಗಳ ಪ್ರಶ್ನೆ: 1) '9' ಅಂಕೆಯ '9' ಅಂಕೆಯನ್ನು ಉಪಯೋಗಿಸಿ ಏನು ಮಾಡಿದರೆ ಉತ್ತರ 1000 ಬರುತ್ತದೆ? 2) '8' ಅಂಕೆಯ 8 ಬ್ಲಾಕ್ ಇದೆ. ಅದನ್ನು ಹೇಗೆ ಇಟ್ಟರೆ ಒಟ್ಟು 1000 ಬರುತ್ತದೆ? ಉತ್ತರ ನಿರೀಕ್ಷಿಸಿ..**

(ಮುಂದುವರಿಯುವುದು)

# ಕನ್ನಡ ಕವಿಕಾವ್ಯ ಪರಿಚಯ-೩ : ವರಕವಿ ಮುದ್ದಣ

- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.



(ಕಳೆದ ಸಂಚಿಕೆಯಿಂದ)

ಆಗ ಮನೋರಮೆಯು "ಮುನಿಗಳು ಹಾಗಾದರೆ ಮಂತ್ರಗಳನ್ನು ಸಿದ್ಧಿಸಿಕೊಂಡು ಅವುಗಳ ಮೂಲಕ ತಮಗೆ ಬೇಕಾದುದನ್ನು ಸಾಧಿಸಿಕೊಳ್ಳುತ್ತಾರೆಂದಾದರೆ, ನಿಮ್ಮಂತಹ ಕವಿಗಳು ಬಡತನದಲ್ಲಿಯೇ ಹುಟ್ಟಿ, ಬಡತನವನ್ನೇ ಅನುಭವಿಸುತ್ತಿದ್ದು ಕೊನೆಗೆ ಬಡತನದಲ್ಲೇ ಬದುಕನ್ನು ಮುಗಿಸುತ್ತಾರಲ್ಲಾ? ಅಂಥವರು ಈ ತರದ ಯಾವುದಾದರೊಂದು ಮಂತ್ರವನ್ನೇಕೆ ಬಲ್ಲವರಿಂದ ಉಪದೇಶಿಸಿಕೊಂಡು. ಕರಗತ ಮಾಡಿಕೊಳ್ಳುವುದರಿಂದ ಬೇಕಾದುದನ್ನು ಪಡೆದು ಸುಖವಾಗಿ ಬಾಳಬಹುದಲ್ಲವೆ?" ಎಂದು ಪ್ರಶ್ನಿಸುತ್ತಾಳೆ. ಆಗ ಮುದ್ದಣನು ತನಗೂ ಅಂತಹ ಮಂತ್ರ ತಿಳಿದಿದೆ ಎನ್ನುತ್ತಾರೆ. ಹಾಗಾದರೆ ನೀನೂ ಸಹಾ ಪ್ರಾಚೀನ ಋಷಿ-ಮುನಿಗಳಂತೆ ಮಂತ್ರವನ್ನು ತಿಳಿದಿರುವೆಯಾ? ಎಂದು ಮನೋರಮೆಯು ಪ್ರಶ್ನಿಸಿದ್ದಕ್ಕೆ "ನನ್ನಲ್ಲದು ಹಾಸು ಹೊಕ್ಕಾಗಿದೆ" ಎನ್ನುತ್ತಾನೆ. ಅದಕ್ಕುತ್ತರವಾಗಿ ಮನೋರಮೆಯು ಮುದ್ದಣನು ತಿಳಿದಿರುವ ಮಂತ್ರ ಯಾವುದು? ಅದರ ಹೆಸರೇನು? ತನ್ನಲ್ಲಿ ಹೇಳಲೇಬೇಕೆಂದು ಪರಿಪರಿಯಿಂದ ಒತ್ತಾಯಿಸಿ, ಪೀಡಿಸಿ,ತನಗೆ ಅದರ ಹೆಸರನ್ನು ಹೇಳಲೇ ಬೇಕೆನ್ನುತ್ತಾಳೆ ಆಗ ಮುದ್ದಣನು ಜಾಣ್ಮೆಯಿಂದ ಸ್ತ್ರೀಯರಿಗೆ ಮಂತ್ರೋಪದೇಶ ಸಲ್ಲದು ನೀವದನ್ನು ಹೇಳಲಾಗದು; ಕೇಳಲೂ ಬಾರದು, ಕೇಳಿದರೆ ಕಣ್ಣು-ಕಾಲ್ಗಳಿಗೆ ಕೇಡು ಎನ್ನುತ್ತಾನೆ. ಮನೋರಮೆಯು ನೀನನ್ನುವುದು ಸರಿ ನಾನು ಮಂತ್ರವನ್ನು ಕೇಳಿಲ್ಲ: ಬದಲಾಗಿ ಕೇವಲ ಅದರ ಹೆಸರನ್ನು ಮಾತ್ರ ಹೇಳು ಎಂದೆನು ಎನ್ನುವುದಲ್ಲವೆ? ಎಂದಾಗ ಮುದ್ದಣನು ಸ್ತ್ರೀಯರಲ್ಲಿ ಎಂದಿಗೂ ರಹಸ್ಯವನ್ನು ತಿಳಿಸಲಾಗದು. ನೀನು ಯಾರ ಮುಂದಾದರೂ ಆ ಹೆಸರನ್ನು ಹೇಳಿದರೆ ನನ್ನ ಈ ಅಮೂಲ್ಯವಾದ ಮಂತ್ರವು ಭ್ರಷ್ಟವಾಗುತ್ತದೆ ಎನ್ನುತ್ತಾನೆ. ಖಂಡಿತವಾಗಿಯೂ ತಾನು ಬೇರೆ ಯಾರಿಗೂ ಇದರ ಹೆಸರನ್ನು ಹೇಳುವುದಿಲ್ಲವೆಂದು ಮನೋರಮೆಯು ಭಾಷೆಇತ್ತಾಗ ಮುದ್ದಣನು " ಹಾಗಾದರೆ ಕೇಳು" ಎಂದು ಹೇಳಿ ತಿರುತಿರುಗಿ ಅವಳಿಗೆ ಆ ವಿಚಾರದಲ್ಲಿ ಕುತೂಹಲ ಹೆಚ್ಚಿಸಿ ಕೊನೆಗೆ ತಾನು ಮನೋರಮೆಗೆ ಬಹುದೊಡ್ಡದಾದ ಒಂದು ಉಪಕಾರ ಮಾಡುವೆನೆಂಬ ಭಾವನೆಯಿಂದ "ಭವತಿ ಭಿಕ್ಷಾಂದೇಹಿ" ಎಂಬ ಸಪ್ತಾಕ್ಷರೀ ಮಂತ್ರವೇ ತನ್ನಂತಹ ಕವಿಗಳಿಗೆ ಸಿದ್ಧಿಸಿರುವ ಬೀಜ ಮಂತ್ರ" ಎನ್ನುತ್ತಾನೆ. ಇಲ್ಲಿ ಕವಿಯು ಓದುಗರ ಕುತೂಹಲವನ್ನು ಕೆರಳಿಸುತ್ತಾ ಹೋಗಿ ಕೊನೆಗೆ ಹಾಸ್ಯದ ಹೊನಲನ್ನೇ ಹರಿಸುತ್ತಾನೆ. ಅದಕ್ಕೆ ಸರಿಯಾಗಿ ಇದು 'ಕಾಂತಾಸಮ್ಮಿತ' ಕಾವ್ಯವೆಂಬುದರ ಸಾರ್ಥಕತೆಯನ್ನು ಪಡೆಯುದನ್ನು ಇಲ್ಲಿ ನಾವು ಕಾಣಬಹುದು ಇದೇ ರೀತಿಯ ಹಾಸ್ಯ ಪ್ರಸಂಗಗಳು ಈ ಕಾವ್ಯದಲ್ಲಿ ಹಲವಾರು ಇವೆ. ಕಾವ್ಯದ ಕೊನೆಯಲ್ಲಿ ಕತೆಯನ್ನು ಹೇಳಿ ಮುಗಿಸಿದ ನಂತರ ಮನೋರಮೆಯನ್ನು ಕುರಿತು ಸೂಕ್ತ ಮೆಚ್ಚುಗೆ (ಬಹುಮಾನ)ಗಾಗಿ ಪೀಡಿಸುತ್ತಾನೆ. ಇಂತಹ ಉತ್ತಮ ಕತೆಯನ್ನು ಹೇಳಿದರೆ ಅರಮನೆಯವರು ರನ್ನಕಡಗವನ್ನೂ, ಹೊನ್ನಕಂಠಿಕೆಯನ್ನೂ ಉಡುಗೊರೆಯಾಗಿ ಕೊಡುತ್ತಾರೆ, "ನೀನೀವುದೇಂ?" ಎಂದು ವಿಚಾರಿಸುತ್ತಾನೆ, ಆಗ ಮನೋರಮೆಯು ಕತೆಯ "ತಿಳುಳ್" ಹೇಗಿದೆಯೆಂದು ತಿಳಿದು ನನಗೆ ತೋಚಿದಂತೆ "ಸಮ್ಮಾನಿಸುವೆಂ" ಎನ್ನುತ್ತಾಳೆ. ಮಂಗಲಾಚರಣೆಯನ್ನು ಮುಗಿಸಿ ಕವಿ ಮಡದಿಯನ್ನು ಕುರಿತು ಬಹುಮಾನಕ್ಕಾಗಿ ಪೀಡಿಸುತ್ತಾನೆ. ಆಗ ಕವಿ ತನ್ನ ಕಾವ್ಯದಲ್ಲಿ "ಹಾಗಾದರೆ ಇದೋ ಇಂತಿದು" ಎಂದು ಮನೋರಮೆಯಿಂದ ಹೇಳಿಸುತ್ತಾನೆ. ಓದುಗರಿಂದ ಇದು ಗೌಪ್ಯವಾಗಿಯೇ ಉಳಿಯುತ್ತದೆ.

ಕವಿಯು ಬರೆದಿರುವ "ಶ್ರೀರಾಮ ಪಟ್ಟಾಭಿಷೇಕ" ಮತ್ತು "ಅದ್ಭುತ ರಾಮಾಯಣ" ಈ ಎರಡೂ ಪುಸ್ತಕಗಳು ಮದರಾಸು ವಿಶ್ವವಿದ್ಯಾನಿಲಯದ ಆಗಿನ ಇಂಟರ್ ಮಿಡಿಯೇಟ್) ತರಗತಿಗೆ ಕನ್ನಡ ಪಠ್ಯಪುಸ್ತಕಗಳಾಗಿದ್ದುವು. ಈ ಪುಸ್ತಕವನ್ನು ವಿದ್ಯಾರ್ಥಿಗಳಿಗೆ ಬೋಧಿಸುವ ಅವಕಾಶವು ಶ್ರೀಯುತ ಪಂಜೆ ಮಂಗೇಶರಾಯರ ಪಾಲಿಗೆ ಬಂದಿತ್ತು. ಅವರು ಇದನ್ನು ಓದುವಾಗ ತನಗೆ ಕಂಡು ಬಂದ ಕೆಲವೊಂದು ಸಂಶಯಗಳ ಬಗ್ಗೆ ಮುದ್ದಣನಿಗೆ ಪತ್ರ ಬರೆದು ತಿಳಿದುಕೊಳ್ಳುತ್ತಿದ್ದರು. ಭಾಷೆಯ ದೃಷ್ಟಿಯಿಂದ, ಕವಿ ಹಳೆಗನ್ನಡ ಕಾಲಕ್ಕೆ ತನ್ನ ಮನಸನ್ನು ಕೊಂಡೊಯ್ದು, ಆಗಿನ ಭಾಷಾಶೈಲಿಯನ್ನು ಊರಿಸಿ ಕವಿ ತನ್ನ ಕೃತಿಯನ್ನು ರಚಿಸಿರುವನು. ಇನ್ನು,ಸಂಸ್ಕೃತ ಸಮಾಸ ಪದಗಳಿಗೆ ಸಮಾನಾರ್ಥಕಗಳಾದ ಕನ್ನಡ ಪದಗಳನ್ನು-ಮೊದಲೇ ರೂಢಿಯಲ್ಲಿಲ್ಲದಿದ್ದರೆ ಸೃಷ್ಟಿಸಿಯಾದರೂ ಹೇಳುವ ಕಲೆಯನ್ನು ಕವಿ ಕರಗತ ಮಾಡಿಕೊಂಡಿರುವನು. ಉದಾಹರಣೆಗೆ ಮಂದಮಾರುತ-ಕಿರುವೆಲರ್, ಯಜ್ಞಸೂತ್ರ-ಜನ್ನದಾರ; ಮಂದಸ್ಮಿತ-ಕಿರುನಗೆ; ಆಕಾಶಗಂಗೆ-ಬಾಂಬೊಳ್ಚ; ಸೂರ್ಯವಂಶ-ನೇಸರ್ ಬಳಿ; ಪ್ರತಿವಚನ-ಮಾರ್ನುಡಿ;ಪಕ್ಷಿರಥ-ಪಕ್ಕಿದೇರ; ಚಕ್ರಾಯುಧ-ಪಾರುಂಬಳೆ; ಶಯ್ಯಾಗೃಹ-ಸೆಜ್ಜೆವನೆ; ಕ್ಷೀರಸಾಗರ-ಇಂಗಡಲ್; ಪುಣ್ಯಕಾರ್ಯ-ಸೈಪಿನೆಸಕ; ವಿಮಾನ-ಗಾಳಿದೇರು; ಗಾನವಿದ್ಯಾ-ಗಾಣಬಿಜ್ಜೆ; ಆಕಾಶವಾಣಿ-ಬಾನ್ನುಡಿ: ಪುಷ್ಪವೃಷ್ಟಿ-ಅರಲ್ಮಳೆ ; ಪುಷ್ಪಕವಿಮಾನ-ಪೂದೇರ್- ಹೀಗೆಯೇ ಪಟ್ಟಿ ಮಾಡುತ್ತಾ ಹೋದರೆ ತುಂಬಾ ಇವೆ. ಒಂದೇ ಅಂಕಿತ ನಾಮಕ್ಕೆ ಹಲವಾರು ಅಂಕಿತ ಪದಗಳನ್ನು ಉಪಯೋಗಿಸುವುದು ಈ ಕವಿಯ ವೈಶಿಷ್ಟ್ಯ ಬ್ರಹ್ಮನನ್ನು ಬೊಮ್ಮ,ವಿಧಿ,ಬೇದಬಿಜ್ಜೆಗ, ಹಿರಣ್ಯಗರ್ಭ, ನಾಲ್ಮೊಗ, ಅಂಚೆದೇರ, ಕಮಲಾಸನ-ಇತ್ಯಾದಿಯಾಗಿ ಸಂಬೋಧಿಸುವುದು, ಭಟ್ಟಾಕಳಂಕ ಕವಿಯ ಶಬ್ದಾನುಶಾಸನ ಮಾದರಿಯಲ್ಲಿ, ಕನ್ನಡದಲ್ಲಿ ಚಿಕ್ಕ ಸೂತ್ರಗಳನ್ನು ಕಲ್ಪಿಸಿ, ಸೂತ್ರಾತ್ಮಕವಾದ ವ್ಯಾಕರಣವೊಂದನ್ನು ಬರೆಯ ಬೇಕೆಂದು ಬಯಸಿದ್ದನು. ಇಂಗ್ಲೀಷಿನ ಸೈಕ್ಲೋಪೀಡಿಯಾ ಮಾದರಿಯ ಒಂದು ಕೋಶ, ಗೋದಾವರಿ, ಎಂಬ ಒಂದು ಕಾದಂಬರಿ, ಜೋಗುಳ ಶಬ್ದದ ವ್ಯುತ್ಪತ್ತಿಯನ್ನು ಕುರಿತು "ಚಕ್ರಧಾರಿ" ಎಂಬ ಗುಪ್ತನಾಮದಿಂದ ಸಂಶೋಧನಾತ್ಮಕ ಲೇಖನ ಇತ್ಯಾದಿಗಳೆಲ್ಲವೂ ಮುದ್ದಣ ಕವಿಯ ಅಪೂರ್ಣವಾಗಿ ಉಳಿದಿರುವ ಕೃತಿಗಳಾಗಿವೆ "ಕುಶವಿಜಯ" ಎಂಬ ಗ್ರಂಥವೊಂದನ್ನು ಬರೆಯುವ ಉದ್ದೇಶ ಈತನದಿತ್ತು. ಭಗವದ್ಗೀತೆಯನ್ನು ಭಾಮಿನಿ ಷಟ್ಪದಿಯಲ್ಲಿಯೂ, ಕರ್ಣಾಟಕ ರಾಮಾಯಣವನ್ನು ವಾರ್ಧಿಕ ಷಟ್ಪದಿಯಲ್ಲಿಯೂ ಬರೆದಿರುವನು, ವ್ಯಾಕರಣ, ನಿಘಂಟು, ವಿಶ್ವಕೋಶ ಮುಂತಾದುವುಗಳ ರಚನೆಯಲ್ಲಿ ತೊಡಗಿದ್ದ ಲಕ್ಷ್ಮೀನಾರಾಯಣನು ಇಷ್ಟರಲ್ಲಿಯೇ ವಿಧಿವಶನಾದದ್ದು ಕನ್ನಡಿಗರ ದುರ್ದೈವವೇ ಸರಿ. ತನ್ನ 32ನೇಯ ವಯಸ್ಸಿನಲ್ಲಿ 1901ರ ಫೆಬ್ರವರಿ 15ರಂದು ಕವಿ ಉಡುಪಿಯಲ್ಲಿ ಕ್ಷಯರೋಗದಿಂದಾಗಿ ಇಹಲೋಕ ಯಾತ್ರೆಯನ್ನು ಮುಗಿಸಿದನು. ಇಂತಹ ಉದ್ದಾಮ ಕವಿಗೆ ಗೌರವಪೂರ್ವಕವಾಗಿ ಎರಡಕ್ಷರದಿಂದ "ನಮೋ" ಎನ್ನೋಣವೇ?

# ಪ್ರತಿಭಾನ್ವಿತ ಗಾಯಕಿ ಡಾ। ಸುಶೀಲ ವಿದ್ಯಾರಣ್ಯ

## ಸೋಂಪಾ ಚಿತ್ರದ ಮೂಲಕ ಚಲನಚಿತ್ರ ಹಿನ್ನಲೆ ಗಾಯಕಿ



ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಕೋಲ್ಪೆ ಮೂಲದವರಾದ, ಮುಂಬಯಿಯಲ್ಲಿ ನೆಲೆಸಿರುವ ಶ್ರೀ ಹರೀಶ್ ರಾವ್ ಮತ್ತು ಸುಮಿತ್ರಾ ದಂಪತಿಗಳ ಪುತ್ರಿ ಡಾ. ಸುಶೀಲ ವಿ ರಾವ್ ಹುಟ್ಟಿ ಬೆಳೆದದ್ದು ಮುಂಬಯಿ ಮಹಾನಗರದಲ್ಲಿ. ಬಾಲ್ಯದಿಂದಲೇ ಸಂಗೀತದ ಗೀಳು ಹಚ್ಚಿಕೊಂಡ ಇವರು ಡೊಂಬಿವಿಲಿಯ ವ್ಯೆಸೂರು ಸಂಗೀತ ವಿದ್ಯಾಲಯದ ಗುರುಗಳಾದ ಶ್ರೀಮತಿ ಉಮಾ ನಾಗಭೂಷಣ್‌ರವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಹಾಗೂ ವೀಣೆಯನ್ನೂ ಕಲಿತರು.ಸತತ ಪರಿಶ್ರಮದ ಮೂಲಕ ಸಂಗೀತದ ವಿವಿದ ಮಜಲುಗಳನ್ನು ಅಭ್ಯಾಸ ಮಾಡುತ್ತಾ ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.ನಮ್ಮ ಜಿಲ್ಲೆಯ ಹೆಮ್ಮೆಯ ಪ್ರತಿಭೆಯಾಗಿ ಮಂಗಳೂರಿನಲ್ಲಿ ನೆಲೆಸಿರುವ ಇವರು ಅನೇಕ ಸಂಗೀತಾಸಕ್ತರಿಗೆ ತರಬೇತಿ ನೀಡುತ್ತಿದ್ದಾರೆ. ವೃತ್ತಿಯಲ್ಲಿ ಹೋಮಿಯೋಪತಿ ವೈದ್ಯೆಯಾಗಿ, ವಿದ್ಯಾರಣ್ಯ ಕೊಲ್ಲಿಪಾಲ್‌ರ ಪತ್ನಿಯಾಗಿ ಪುಟಾಣಿ ಹಂಸಿಕಾಳ ತಾಯಿಯಾಗಿ ಸುಖೀ ಸಂಸಾರದ ಸಮೃದ್ಧ ಗೃಹಿಣಿ ಇವರಾಗಿದ್ದಾರೆ.

**ಸಾಧನೆ-ಪುರಸ್ಕಾರಗಳು.**

ನಾಡಿನ ಜನಪ್ರಿಯ ಈಟಿವಿ ವಾಹಿನಿಯ ಎದೆ ತುಂಬಿ ಹಾಡುವೆನು ,ದೂರದರ್ಶನ ಚಂದನ,ಆಕಾಶವಾಣಿ,ಹಾಗೂ ಶ್ರೀ ಶಂಕರ ವಾಹಿನಿಗಳಲ್ಲಿ ಕಾರ್ಯಕ್ರಮವನ್ನು ನೀಡಿ ಗಮನಸೆಳೆದಿದ್ದಾರೆ. ಚಂದನ ವಾಹಿನಿಯ ಪ್ರಸಿದ್ಧ ಮಧುರ ಮಧುರವೀ ಮಂಜುಳ ಗಾನ ಕಾರ್ಯಕ್ರಮದಲ್ಲಿ ಹಾಡಿದ್ದಾರೆ. ಕರ್ನಾಟಕ ರಾಜ್ಯ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯ ಯುವ ಸೌರಭ ಕಾರ್ಯಕ್ರಮದಲ್ಲಿ ಸಂಗೀತ ಕಛೇರಿ ನೀಡಿದ್ದಾರೆ.


ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಕನ್ನಡ ಪೌರಾಣಿಕ ನಾಟಕ ಶರಶಯ್ಯೆ ಹಾಗೂ ಶ್ರೀ ಶಂಕರಾಚಾರ್ಯ ನಾಟಕಗಳಿಗೆ ಹಿನ್ನಲೆ ಗಾಯಕಿಯಾಗಿ ಹಾಡಿದ ಖ್ಯಾತಿ ಇವರದು. ಕಲಾಜಗತ್ತು ಮುಂಬಯಿ ಇವರ ಶ್ರೀ ವಿಜಯಕುಮಾರ್ ಶೆಟ್ಟಿ ರಚಿಸಿ ನಿರ್ದೇಶಿಸಿದ ತುಳು ಗೀತೆಗಳ ಸಂಗ್ರಹ ಗೊಂಚಿಲ್, ಹಾಗೂ ಜಿಲ್ಲೆ ಪ್ರಸಿದ್ಧ ದೇವಾಲಯಗಳಾದ ಬಂಗಾಡಿ,ಕೊಲ್ಲಿ ದುರ್ಗಾದೇವಿ ಮತ್ತು ಗಡಿನಾಡಿನ ಶ್ರೀ ವರ್ಕಾಡಿ ಕಾವೀ ಸುಬ್ರಹ್ಮಣ್ಯ ದೇವಸ್ಥಾನಗಳ ಧ್ವನಿ ಸುರುಳಿಗಳಲ್ಲಿ ಹಾಡಿದ್ದಾರೆ. ಅಷ್ಟೇ ಅಲ್ಲದೆ ಮುಂಬಯಿ ಮಹಾನಗರ, ಬೆಂಗಳೂರು, ಅವಿಭಜಿತ ದಕ್ಷಿಣ ಕನ್ನಡ -ಉಡುಪಿ ಜಿಲ್ಲೆಗಳ ಹಲವು ಸಂಘ ಸಂಸ್ಥೆಗಳ ಆಶ್ರಯದಲ್ಲಿ ಅನೇಕ ಶಾಸ್ತ್ರೀಯ ಸಂಗೀತ,ಸುಗಮ ಸಂಗೀತ, ಜಾನಪದ ಕಾರ್ಯಕ್ರಮಗಳನ್ನು ನೀಡಿದ್ದಾರೆ.

ಇವರ ಅದ್ಭುತ ಪ್ರತಿಭೆಯನ್ನು ಗುರುತಿಸಿ ಕಲಾಸೌರಭ ಮುಂಬಯಿ ಸಂಸ್ಥೆಯಿಂದ ಸೌಜನ್ಯ ಶ್ರೀ ಪ್ರಶಸ್ತಿ, ಬೆಳ್ತಂಗಡಿ ಕೊಲ್ಲಿಪಾಲ್ ಶ್ರೀ ದುರ್ಗಾದೇವೀ ದೇವಸ್ಥಾನದ ಗಣೇಶೋತ್ಸವ ಸಮಿತಿಯವರಿಂದ ಭಕ್ತಿಗಾನ ಚತುರೆ ಪ್ರಶಸ್ತಿಯನ್ನು ಪಡೆದಿದ್ದಾರೆ.

ಬಿಡುಗಡೆಗೆ ಸಿದ್ಧವಾಗಿರುವ ತುಳು ಚಿತ್ರ ಸೋಂಪಾ ಹಾಗೂ ಸತ್ಯಾದಿಗೆದ ಮಣ್ಣ್ ಎಂಬ ಕಿರುಚಿತ್ರದಲ್ಲಿ ಹಾಡುವ ಮೂಲಕ ಚಲನಚಿತ್ರ ಹಿನ್ನಲೆ ಗಾಯಕಿಯಾಗಿ ಹೊಸ ಸಾಧನೆಯ ಮೂಲಕ ತಮ್ಮ ಪ್ರತಿಭೆಯನ್ನು ಪ್ರಚುರ ಪಡಿಸಿದ್ದಾರೆ. ಸಂಗೀತ ಕ್ಷೇತ್ರದಲ್ಲಿ ಇನ್ನಷ್ಟು ಎತ್ತರಕ್ಕೆ ಏರಬೇಕು ಜೊತೆಗೆ ತನ್ನಲ್ಲಿರುವ ಪ್ರತಿಭೆಯನ್ನು ಸಂಗೀತಾಸಕ್ತರೊಂದಿಗೆ ಹಂಚಿಕೊಳ್ಳಬೇಕೆನ್ನುವ ಮಹದಾಸೆ ಇವರದು.

ವರದಿ : **ವರ್ಕಾಡಿ ನಾಗರಾಜ ರಾವ್**

# ಕನ್ನಡ ಸಾಹಿತ್ಯ ಪರಿಷತ್ ಕಾಪು ಹೋಬಳಿ ಘಟಕದ ಅಧ್ಯಕ್ಷರಾಗಿ ವೈ. ಮಧುಸೂದನ ರಾವ್ ಕುಂಜಾರು ಗಿರಿ



ಉಡುಪಿ ತಾಲೂಕು ಕಾಪು ಹೋಬಳಿಯ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ವೈ. ಮಧುಸೂಧನ ರಾವ್ ಕುಂಜಾರುಗಿರಿ ಆಯ್ಕೆಯಾಗಿರುತ್ತಾರೆ.

ಉಡುಪಿಯಲ್ಲಿ ನಡೆದ ಜಿಲ್ಲಾ ಕ.ಸ.ಪದ ಸಭೆಯಲ್ಲಿ ಜಿಲ್ಲಾ ಕ.ಸ.ಪ ಅಧ್ಯಕ್ಷರಾದ ನೀಲಾವರ ಸುರೇಂದ್ರ ಅಡಿಗರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸರ್ವಾನುಮತದಿಂದ ಶ್ರೀಮಧುಸೂದನ ರಾವ್ ಆಯ್ಕೆಯಾಗಿದ್ದಾರೆಂದು ಪ್ರಕಟಿಸಿದರು.

ಕುಂಜಾರುಗಿರಿಯಲ್ಲಿ ವಾಸ್ತವ್ಯವಿರುವ ಶ್ರೀ ಎಲ್ಲೂರು ಅಚ್ಚುತ್‌ರಾವ್ ಹಾಗೂ ಶ್ರೀಮತಿ ಮೀನಾಕ್ಷಿ ದಂಪತಿಗಳ ಪುತ್ರರಾದ ಶ್ರೀ ಮಧುಸೂಧನರಾವ್ ವಿದ್ಯಾರ್ಥಿ ದೆಸೆಯಲ್ಲಿಯೇ ಸಾಹಿತ್ಯಾಭಿರುಚಿಯನ್ನು ಹೊಂದಿದ್ದು, ಬೇರೆ ಬೇರ ಸಂಘಟನೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿರುತ್ತಾರೆ.

ಕುಂಜಾರುಗಿರಿಯ ಸ್ಪಂದನ ಕಲಾ ವೇದಿಕೆಯ ಸ್ಥಾಪಕ ಅಧ್ಯಕ್ಷರಾಗಿದ್ದು ಪಡುಬೆಳ್ಳೆ-ಪಾಜೈ ಹಾಲು ಉತ್ಪಾದಕ ಸಂಘದ ನಿರ್ದೇಶಕರಾಗಿ 2 ಬಾರಿ ಆಯ್ಕೆಯಾಗಿರುತ್ತಾರೆ. ಪಡುಬೆಳ್ಳೆಯ ಶ್ರೀ ನಾರಾಯಣ ಗುರು ಪ್ರೌಢ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಮಾಜಿ ಅಧ್ಯಕ್ಷರು ಮತ್ತು ಪ್ರಸ್ತುತ ಗೌರವ ಸಲಹೆಗಾರರಾಗಿರುತ್ತಾರೆ.

ಉಡುಪಿ ತಾಲೂಕು ಪಂಚಾಯತ್‌ನಲ್ಲಿ ಉದ್ಯೋಗಿಯಾಗಿರುವ ಶ್ರೀ ಮಧುಸೂಧನ ರಾವ್ ಅವರ ವಿಶೇಷ ಒಲವು ಸಾಹಿತ್ಯ ಚಟುವಟಿಕೆಗಳು.

ವರದಿ : **ವೈ. ಮಧುಸೂದನ ರಾವ್**

# ಹೆತ್ತವರಿಗೆ ಹಿರಿಮೆ ತಂದ ಹರ್ಷಿತ ರಾವ್



ಹೆತ್ತವರಿಗೆ ಹಿರಿಮೆ ತರುವ ಮಕ್ಕಳು ಹುಟ್ಟುವುದೂಕೂಡಾ ಹಿಂದಿನ ಜನ್ಮದ ಪುಣ್ಯವೇ ಸರಿ. ಅಂತಹ ಮಕ್ಕಳನ್ನು ಪಡೆಯಲು ದೇವರ ದಯೆ ಇರಬೇಕು ಎಂಬುದು ಹಿರಿಯರ ಅಭಿಪ್ರಾಯ. ಇಂತಹ ಪುಣ್ಯವಂತರ ಸಾಲಿನಲ್ಲಿ ಶ್ರೀ ಧರ್ಮಸ್ಥಳದ ನಿಡ್ಲೆಯಲ್ಲಿ ಜನಿಸಿ ಕಾರ್ಕಳದಲ್ಲಿ ನೆಲೆಸಿರುವ ಐಡಿಯಲ್ ಸ್ಟುಡಿಯೋ ಮಾಲಕರಾದ ಶ್ರೀ ಹರಿಶ್ಚಂದ್ರ ಮತ್ತು ವಂದನರಾವ್ ಬರುತ್ತಾರೆ. ಕಾರ್ಕಳದ ಶ್ರೀ ಮಧ್ಭುವನೇಂದ್ರ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡಿದ ಕುಮಾರಿ ಹರ್ಷಿತರಾವ್ ಈ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇಕಡಾ 97 ಅಂಕ ಪಡೆದು ಎಲ್ಲರ ಪ್ರಶಂಸೆಗೆ ಪಾತ್ರಳಾಗಿದ್ದಾಳೆ.

ಶಿಕ್ಷಣ ಎಂದರೆ ನಾಲ್ಕು ಗೋಡೆಯೊಳಗೆ ಕಲಿತು ಪುಸ್ತಕದ ವಿಷಯಗಳನ್ನು ಉರು ಹೊಡೆದು ಅಂಕ ಗಳಿಸುವುದು ಮಾತ್ರ ಅಲ್ಲ ಎಂಬುದನ್ನು ಕು. ಹರ್ಷಿತಾ ಸಾಧಿಸಿ ತೋರಿಸಿದ್ದಾಳೆ. ತಂದೆಯ ಪೋಟೋಗ್ರಫಿಯಲ್ಲಿ ಆಸಕ್ತಿಯೊಂದಿಗೆ ಕೇರಂ, ಶಟ್ಲ್, ಬ್ಯಾಡ್ಮಿಂಟನ್ ಆಟಗಳಲ್ಲೂ ಪ್ರವೀಣೆ. ಅಭಿನಯ, ಶಾಸ್ತ್ರೀಯ ಸಂಗೀತದಲ್ಲೂ ಪರಿಣತೆ. ಮಕ್ಕಳು ಬಿಡುವಿನ ವೇಳೆಯನ್ನೆಲ್ಲ ಟಿ.ವಿ. ವೀಕ್ಷಣೆ, ವಿಡೀಯೋ ಗೇಮ್‌ಗಳಲ್ಲಿ ಕಳೆಯುವ ಇಂದಿನ ದಿನಗಳಲ್ಲಿ ಅಪರೂಪವೆಂಬಂತೆ ಕುಮಾರಿ ಹರ್ಷಿತಾ ರಾವ್ ಗ್ರಂಥಾಲಯದಲ್ಲೂ ಮನೆಯಲ್ಲೂ ಪುಸ್ತಕ ಓದುತ್ತಾ ಸುಯದ ಸದುಪಯೋಗ ಮಾಡುತ್ತಾಳೆಂದರೆ ಅದು ಅವಳ ಒಳ್ಳೆಯ ಹವ್ಯಾಸಕ್ಕೆ ನಿರ್ದಶನವಾಗಿದೆ. ಎಲ್ಲಕ್ಕೂ ಮಿಗಿಲಾಗಿ 2011-12 ನೇ ಸಾಲಿನಲ್ಲಿ ನಡೆದ ಭರತನಾಟ್ಯ ಸೀನಿಯರ್ ಪರೀಕ್ಷೇಯಲ್ಲಿ ಸಂಗೀತ ನೃತ್ಯ ಗುರುಗಳೇ ಬೆರಗಾಗುವಂತೆ ಶೇಕಡಾ 90 ಅಂಕ ಗಳಿಸಿ ಹೆತ್ತವರಿಗೂ, ಗುರುಗಳಿಗೂ ಹೆಮ್ಮೆಯ ಮಗುವೆನಿಸಿದ್ದಾಳೆ. ಬಹುಮುಖ ಪ್ರತಿಭೆಯ ಕುಮಾರಿ ಹರ್ಷಿತ ಎ.ರಾವ್‌ಳನ್ನು ಕಾರ್ಕಳ ಶಂಕರ ಪ್ರತಿಷ್ಠಾನ ತುಂಬು ಹೃದಯದಿಂದ ಅಭಿನಂದಿಸುತ್ತದೆ.

**-ಶ್ರೀಮತಿ ಸಾವಿತ್ರಿ ಮನೋಹರ್ ಕಾರ್ಕಳ**

# ಕಾರ್ಕಳ : ವರಮಹಾಲಕ್ಷ್ಮಿ ಪೂಜೆ

"ಯಾವುದೇ ಪೂಜೆ ಸಾಮೂಹಿಕವಾಗಿ ಮಾಡಿದಾಗ ಅಧಿಕ ಫಲ ಪ್ರಾಪ್ತಿ. ಆದ್ದರಿಂದ ಈ ಕಲಿಯುಗದಲ್ಲಿ ಎಲ್ಲರೂ ಒಂದೆಡೆ ಸೇರಿ ಭಕ್ತಿಯಿಂದ ವರ ಮಹಾಲಕ್ಷ್ಮಿಯನ್ನು ಪೂಜಿಸಿದರೆ ಪ್ರಾರ್ಥನೆಗೆ ಒಲಿದು ಮಹಾಲಕ್ಷ್ಮಿವರ ಪ್ರಾಸಾದಿಸುತ್ತಾಳೆ" ಎಂದು ಶ್ರೀ ಭುವನೇಂದ್ರ ಕಾಲೇಜಿನ ಸಂಸ್ಕೃತ ವಿಭಾಗದ ಮುಖ್ಯಸ್ಥರಾದ ಡಾ। ಯಾಜಿ ಎಚ್. ನಿರಂಜನ ಭಟ್, ಪಾವಂಜೆ ಇವರು ನುಡಿದರು.

ಶ್ರೀಯುತರು ಕಾರ್ಕಳ ಶಂಕರ ಪ್ರತಿಷ್ಠಾನದ ವತಿಯಿಂದ ಹಮ್ಮಿಕೊಂಡ ಸಾಮೂಹಿಕ ವರಮಹಾಲಕ್ಷ್ಮಿ ಪೂಜಾ ಕಾರ್ಯಕ್ರಮದಲ್ಲಿ ಧಾರ್ಮಿಕ ಉಪನ್ಯಾಸ ನೀಡಿ ವರಮಹಾಲಕ್ಷ್ಮಿ ವೃತದ ಕಥೆ ಮತ್ತು ಮಹತ್ವವನ್ನು ತಿಳಿಸಿದರು. ಆರಂಭದಲ್ಲಿ ಪಂಚ ಗವ್ಯ ಮತ್ತು ಪುಣ್ಯಾಹ, ಗಣಹೋಮದೊಂದಿಗೆ ಕಲಶ ಪ್ರತಿಷ್ಠೆ ನಡೆಯಿತು. ಮಹಿಳೆಯರಿಂದ ಸಾಮೂಹಿಕ ಅರ್ಚನೆ ಮತ್ತು ಭಜನೆ ನಡೆಯಿತು. ಮಹಾಮಂಗಳಾರತಿ, ಪ್ರಸಾದ ವಿತರಣೆಯ ನಂತರ ಶ್ರೀ ಭವಾನಿ ಶಂಕರರಾವ್ ಮತ್ತು ಕುಟುಂಬದವರು ಸುಗ್ರಾಸ ಭೋಜನ ಏರ್ಪಡಿಸಿದ್ದರು. ಕಾರ್ಯಕ್ರಮಕ್ಕೆ ಸ್ಥಳದಾನವಿತ್ತು ಭೋಜನ ಪ್ರಾಯೋಜಕರಾದ ಭವಾನಿಶಂಕರ್ ಕುಂಟುಂಬದವರಿಗೆ ಶಂಕರ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ರಾಮಮೋಹನರಾಯರು ಧನ್ಯವಾದವಿತ್ತು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ ಸದಸ್ಯರಿಗೆ ಕೃತಜ್ಞತೆ ಸಲ್ಲಿಸಿದರು.

**-ಶಂಕರ ಪ್ರತಿಷ್ಠಾನ, ಕಾರ್ಕಳ**

## ಶಿಕ್ಷಣ-ಮಗುವಿನ ಹಕ್ಕು (4ನೇ ಪುಟದಿಂದ)

ಕರ್ತವ್ಯವಾಗುವುದು ಮತ್ತು ಶಿಕ್ಷಣವನ್ನು ಪಡೆಯುವುದು ಮಗುವಿನ 'ಹಕ್ಕು' ಆಗಿರುವುದು, ಹಕ್ಕು ಮತ್ತು ಕರ್ತವ್ಯಗಳು ಪರಸ್ಪ ರ ಪೂರಕ ವಿಷಯಗಳಾಗಿರುವುದರಿಂದ ಮಗುವಿಗೆ ಶಿಕ್ಷಣ ಪಡೆಯುವ ಹಕ್ಕಿನೊಂದಿಗೆ ಸಾಮಾಜಿಕ ಬದ್ಧತೆಯ ಕರ್ತವ್ಯವೂ ಇರುವುದು.

ಶಿಕ್ಷಣ ಕತ್ತಲೆಯಿಂದ ಬೆಳಕಿನೆಡೆಗೆ ಕೊಂಡೊಯ್ಯುವುದರಿಂದ ಮತ್ತು ಮಗು ಸಮಾಜದ ಬೆಳಕಾಗಿ ಬೆಳೆಯ ಬೇಕಾಗಿರುವುದರಿಂದ 'ಶಿಕ್ಷಣ ಮಗುವಿನ ಹಕ್ಕು' ಆಗಿರುವುದು. ವ್ಯಕ್ತಿತ್ವದ ವಿಕಸನವೇ ಶಿಕ್ಷಣದ ಗುರಿಯಾಗಿರುವುದರಿಂದ ಮತ್ತು ಸಮಾಜ ಸುಶಿಕ್ಷಿತ ಪ್ರಜೆಗಳ ಸೇವೆಯನ್ನು ನಿರೀಕ್ಷಿಸುವುದರಿಂದ 'ಶಿಕ್ಷಣ ಮಗುವಿನ ಹಕ್ಕು' ಆಗಿರುವುದು. ಶಿಕ್ಷಣ ಮಗುವನ್ನು ಪಶುತ್ವದಿಂದ ಮಾನವತ್ವದ ಕಡೆಗೆ ನಡೆಸುವುದರಿಂದ 'ಶಿಕ್ಷಣ ಮಗುವಿನ ಹಕ್ಕು' ಆಗಿರುವುದು. ಶಿಕ್ಷಣ ಮಗುವಿನ ಬೆಳೆವಣಿಗೆಯೊಂದಿಗೆ ಸಮಾಜದ ಬೆಳವಣಿಗೆಗೂ ಕಾರಣವಾಗಿರುವುದರಿಂದ 'ಶಿಕ್ಷಣ ಮಗುವಿನ ಹಕ್ಕು' ಆಗಿರುವುದು. ಸಮಾಜವು ಗುಣಸಂಪನ್ನ ನಾಗರಿಕರನ್ನು ಅಪೇಕ್ಷಿಸುವು ದರಿಂದ ಮತ್ತು ಅದು ಶಿಕ್ಷಣದಿಂದ ಮಾತ್ರ ಸಾಧ್ಯವಾಗಿರುವುದರಿಂದ 'ಶಿಕ್ಷಣ ಮಗುವಿನ ಹಕ್ಕು' ಆಗಿರುವುದು. ಶಿಕ್ಷಣ ಮಗುವಿನಲ್ಲಿ ಮಾನವೀಯತೆಯನ್ನು ಬೆಳೆಸುವುದರಿಂದ ಮತ್ತು ಮಾನವೀಯತೆಯೇ ಸಮಾಜದ ಧ್ಯೇಯವಾಗಿರುವುದರಿಂದ 'ಶಿಕ್ಷಣ ಮಗುವಿನ ಹಕ್ಕು' ಆಗಿರುವುದು.

ಹಂತ ಹಂತವಾಗಿ ವಿಶ್ಲೇಷಿಸಿದ ಕಾರಣಗಳಿಂದ 'ಶಿಕ್ಷಣ ಮಗುವಿನ ಹಕ್ಕು' ಆಗಿದೆ ಮಾತ್ರವಲ್ಲ ಸಮಾಜದ ಕತ್ತಲೆಯನ್ನು 'ಶಿಕ್ಷಣ' ಎಂಬ ದೀವಿಗೆಯಿಂದ ಹೊಡೆದೋಡಿಸಿ ಸುಖೀ ಸಮಾಜವನ್ನು ನಿರ್ಮಾಣ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಪ್ರಜ್ಞಾವಂತ ಹೆತ್ತವರು ಮತ್ತು ಪೋಷಕರು ಇದನ್ನು ಮನವರಿಕೆ ಮಾಡಿಕೊಂಡು ತಮ್ಮ ಮಕ್ಕಳಿಗೆ ಸಕಾಲದಲ್ಲಿ ಯೋಗ್ಯ ಶಿಕ್ಷಣವನ್ನು ನೀಡಿ ಮಗುವಿನ ಭವಿಷ್ಯವನ್ನು ಉಜ್ವಲಗೊಳಿಸುವುದಲ್ಲದೆ ಸಮಾಜದ ಉನ್ನತಿಗೆ ಶ್ರಮಿಸುವುದು ಉಚಿತವಲ್ಲವೇ?

## ಮಠಂತಬೆಟ್ಟು ಶ್ರೀ ರಾಜರಾಜೇಶ್ವರಿ ದೇವಸ್ಥಾನ

**ಕೋಡಿಂಬಾಡಿ-ಪುತ್ತೂರು ತಾಲೂಕು, ದ.ಕ. ದೂರವಾಣಿ: 08251-261010, ಮೊ. : 9901247080**

ಆತ್ಮೀಯ ಸಮಾಜಬಾಂಧವರೇ,

ಮಠಂತ ಬೆಟ್ಟು ಶ್ರೀರಾಜರಾಜೇಶ್ವರಿ ದೇವಸ್ಥಾನದಲ್ಲಿ ಬರುವ ದಿನಾಂಕ 16-10-2012ರಿಂದ ದಿನಾಂಕ 24-10-2012ರ ತನಕ ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯ ಕ್ರಮದೊಂದಿಗೆ

**ನವರಾತ್ರಿ ಉತ್ಸವ ಮತ್ತು ಶ್ರೀ ಚಂಡಿಕಾ ಹೋಮದೊಂದಿಗೆ**

(ದಿನಾಂಕ 21-10-2012ರಂದು) ನಡೆಯಲಿದೆ.

ಸಮಾಜಬಾಂಧವರು ಈ ದೇವತಾ ಕಾರ್ಯ ಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಶ್ರೀದೇವಿಯ ತೀರ್ಥ ಪ್ರಸಾದವನ್ನು ಸ್ವೀಕರಿಸಿ ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುವ,

ಅರ್ಚಕರು : ಶ್ರೀ ಯಂ. ನಾಗೇಶ ಶರ್ಮ
ಮೊಬೈಲ್ : 9901247080

ಅಧ್ಯಕ್ಷರು : ಶ್ರೀ ಟಿ.ಅಣ್ಣಪ್ಪಯ್ಯ
ತೆಂಕಿಲ

ಹಾಗೂ ಆಡಳಿತ ಮಂಡಳಿ ಸದಸ್ಯರು

ವಿಶೇಷ ಸೇವೆ : **ಅನ್ನಸಂತರ್ಪಣೆ : 501/-**
**ಚಂಡಿಕಾ ಹೋಮ : 501/-, ರಂಗಪೂಜೆ : 301/-, ನವರಾತ್ರಿ ಪೂಜೆ : 201/-**

ಸಮಾಜ ಬಾಂಧವರು ಅನ್ನ ಸಂತರ್ಪಣೆಗೆ ಸಹಕರಿಸಬೇಕಾಗಿ ವಿನಂತಿ

## ಪಂಜುರ್ಲಿ ದೈವದ ಪ್ರತಿಷ್ಠೆ

ಸುಮಾರು 300 ವರ್ಷಗಳ ಹಿಂದೆ ಕಾರ್ಕಳ ಬಳಿ ಇರುವ ಅಜೆಕಾರಿನಿಂದ ವಲಸೆ ಬಂದು ಬ್ರಹ್ಮಾವರದಲ್ಲಿ ನೆಲೆ ನಿಂತ ಸ್ಥಾನಿಕ ಕುಟುಂಬ ಬಾಂಧವರು 1999ರಲ್ಲಿ ಆರೂಢ ಪ್ರಶ್ನೋತ್ತರದ ನೆಲೆಯಲ್ಲಿ ಮೂಲಸ್ಥಾನ ಅಜೆಕಾರಿನಲ್ಲಿ ಅನಾದಿ ಕಾಲದಿಂದ ನಂಬಿಕೊಂಡು ಬಂದ ಧೂಮಾವತಿ ಮತ್ತು ರಕ್ತೇಶ್ವರಿ ದೈವಗಳಿಗೆ ಸಹ ಪರಿವಾರ ಸಮೇತ ಗುಡಿಕಟ್ಟಿ ಆರಾಧಿಸಿಕೊಂಡು ಬಂದಿದ್ದರು. ಬ್ರಹ್ಮಾವರ ಕುಟುಂಬದಲ್ಲಿ ಜಿಜ್ಞಾಸೆಯನ್ನು ಹೊತ್ತ ಕೆಲವು ಬಾಂಧವರು ಇನ್ನಷ್ಟು ವಿಚಾರ ಶೋಧನೆ ನಡೆಸಿದಾಗ ಅಜೆಕಾರಿನ ವಿಷ್ಣುಮೂರ್ತಿ ದೇವಸ್ಥಾನದ ನೈಋತ್ಯದಲ್ಲಿ ಆದಿಯಿಂದ ಸೇವೆಯನ್ನು ಸ್ವೀಕರಿಸುತ್ತಿದ್ದ ಪಂಜುರ್ಲಿ ದೈವದ ಪುನಃ ಪ್ರತಿಷ್ಠಾಪನೆಯು ಅಗತ್ಯಕಂಡುಬಂತು. ತದನಂತರ ಉಡುಪಿ ಶ್ರೀ ನಾರಾಯಣ ರಾಯರ ನೇತೃತ್ವದಲ್ಲಿ ಬ್ರಹ್ಮಾವರ ಕುಟುಂಬದವರು ಮೊದಲು ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ವಿಶೇಷ ಬಲಿವಾಡ ಪ್ರಸಾದ ಪಡೆದು, ಜೂನ್ 10ರಂದು ಪಂಜುರ್ಲಿ ದೈವದ ಪ್ರತಿಷ್ಠೆಯನ್ನು ಅಜೆಕಾರಿನ ಧೂಮಾವತಿ-ರಕ್ತೇಶ್ವರಿ ದೈವಗಳ ಸಮೀಪದಲ್ಲಿಯೇ ಅಜೆಕಾರಿನ ವೇದಮೂರ್ತಿ ವೆಂಕಟರಮಣ ಭಟ್ಟರ ಮಾರ್ಗದರ್ಶನದಲ್ಲಿ ಮಾಡಿಸಿದರು.

ವರದಿ : **ಬ್ರಹ್ಮಾವರ ನಾರಾಯಣ ರಾವ್**

## ಮಠಂತಬೆಟ್ಟು ಶ್ರೀ ರಾಜರಾಜೇಶ್ವರಿ ದೇವಸ್ಥಾನ
### ಜೀರ್ಣೋದ್ಧಾರ ಸಮಿತಿ

**ಕೋಡಿಂಬಾಡಿ-ಪುತ್ತೂರು ತಾಲೂಕು, ದ.ಕ. ದೂರವಾಣಿ: 08251-261010**

ಸಮಾಜ ಬಾಂಧವರೇ,

ದಿನಾಂಕ 5-8-2012ರಂದು ಶ್ರೀ ದೇವಳದಲ್ಲಿ ಮಂಗಳೂರಿನ ಕರಣ್ ಬೆಳ್ಳೆಯವರ ಅಧ್ಯಕ್ಷತೆಯಲ್ಲಿ ಹಾಗೂ ಮಂಗಳೂರಿನಲ್ಲಿರುವ ಎಂ.ಆರ್ ವಾಸುದೇವರಾವ್ ಮತ್ತು ಪಾವಂಜೆ ಬ್ರಹ್ಮ ಶ್ರೀ ವೇದ ಮೂರ್ತಿ ವಾಗೀಶ ತಂತ್ರಿಗಳ ದಿವ್ಯ ಉಪಸ್ಥಿತಿಯಲ್ಲಿ ಶ್ರೀ ದೇವಳದ ಜೀರ್ಣೋದ್ಧಾರ ಸಮಿತಿಯನ್ನು ರಚಿಸಲಾಯಿತು.

ಸಂರಕ್ಷಕರು : ಜಗದ್ಗುರು ಶ್ರೀ ಶ್ರೀ ಭಾರತಿ ತೀರ್ಥ ಮಹಾ ಸ್ವಾಮೀಜಿ, ಶೃಂಗೇರಿ.
ಗೌರವಾಧ್ಯಕ್ಷರು : ಶ್ರೀ ಎಂ. ಆರ್. ವಾಸುದೇವ ರಾವ್, ಮಂಗಳೂರು
ಅಧ್ಯಕ್ಷರು : ಶ್ರೀ ಟಿ. ಉಮೇಶ ರಾವ್, ಪುತ್ತೂರು.
ಸಂಚಾಲಕರು : ಶ್ರೀ ಕರುಣಾಕರ ಬೆಳ್ಳೆ, ಮಂಗಳೂರು.
ಕಾರ್ಯಾಧ್ಯಕ್ಷರು : ಶ್ರೀ ಟಿ. ರಮಾನಂದ ರಾವ್, ಪುತ್ತೂರು
ಪ್ರಧಾನ ಕಾರ್ಯದರ್ಶಿ: ಶ್ರೀ ಯಂ.ನಾಗೇಶ ಶರ್ಮ, ಮಠದ ಬೆಟ್ಟು
ಕೋಶಾಧಿಕಾರಿ : ಶ್ರೀ ಯಂ. ನರೇಂದ್ರ ಕಡಬ ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸಮಾಜಬಾಂಧವರು ಜೀರ್ಣೋದ್ಧಾರ ಸಮಿತಿಯ ಸದಸ್ಯರು ಆಗಿರುತ್ತಾರೆ.

**ಶ್ರೀ ದೇವಳದ ಜೀರ್ಣೋದ್ಧಾರದ ಅಂದಾಜು ವೆಚ್ಚ ರೂ 1 ಕೋಟಿ 50 ಲಕ್ಷ. ಸಮಾಜ ಬಾಂಧವರು ಶ್ರೀ ದೇವಳದ ಜೀರ್ಣೋದ್ಧಾರಕ್ಕೆ ಸಹಕರಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.**

**ಧನ ಸಹಾಯ ಕಳುಹಿಸುವವರು : ಶ್ರೀಮಠದಬೆಟ್ಟು ಶ್ರೀ ರಾಜರಾಜೇಶ್ವರಿ ದೇವಸ್ಥಾನ, ಜೀರ್ಣೋದ್ಧಾರ ಸಮಿತಿ**
**ಕರ್ನಾಟಕ ಬ್ಯಾಂಕ್, ಪುತ್ತೂರು, ಉಳಿತಾಯ ಖಾತೆ ಸಂಖ್ಯೆ 34452**
**ಡಿಸಿಸಿ ಬ್ಯಾಂಕ್ ಪುತ್ತೂರು-ಉಳಿತಾ ಖಾತೆ ಸಂಖ್ಯೆ 3151**

## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

**ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408**

### 2011-12ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು

ಮಾನ್ಯ ಸದಸ್ಯರೇ, ತಾ.16-07-2012

ನಮ್ಮ ಸೊಸೈಟಿಯ 2011-12ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ.23-09-2012ನೇ ರವಿವಾರ ಬೆಳಿಗ್ಗೆ 10-30 ಗಂಟೆಗೆ ನಮ್ಮ ಕಛೇರಿಯಿರುವ ಭೂವರಾಹ ಸಂಕೀರ್ಣದಲ್ಲಿ ನಡೆಯಲಿದೆ. ಸದಸ್ಯರೆಲ್ಲರೂ ಈ ಸಭೆಯಲ್ಲಿ ತಪ್ಪದೇ ಹಾಜರಿರಬೇಕಾಗಿ ವಿನಂತಿ.

ಆಡಳಿತ ಮಂಡಳಿಯ ನಿರ್ಣಯದಂತೆ

ಪಟ್ಟಾಭಿರಾಮ ಎಸ್.ಎಸ್.
ಕಾರ್ಯದರ್ಶಿ

ಎಂ. ಸದಾನಂದ ರಾವ್
ಅಧ್ಯಕ್ಷರು

**ವಿಷಯ ಸೂಚಿ**

1. ಮಹಾಸಭೆಯ ನೋಟೀಸನ್ನು ಓದಿ ಅಂಗೀಕರಿಸುವುದು
2. ತಾ.18-09-2011ರಂದು ಜರಗಿದ ಮಹಾಸಭೆಯ ವರದಿಯ ಅಂಗೀಕಾರ
3. 2011-2012ನೇ ಸಾಲಿನ ವಾರ್ಷಿಕ ವರದಿಯ ಅಂಗೀಕಾರ.
4. 2011-2012ನೇ ವರ್ಷದ ಅಪರಿಶೋಧಿತ ಲಾಭ-ನಷ್ಟ ತಃಖ್ತೆ ಮತ್ತು ಆಸ್ತಿ-ಜವಾಬ್ದಾರಿಗಳ ತಃಖ್ತೆಯ ಪರಿಶೀಲನೆ ಮತ್ತು ಅಂಗೀಕಾರ.
5. 2011-2012ನೇ ಸಾಲಿನ ಅಂದಾಜು ಆಯವ್ಯಯ ತಃಖ್ತೆಗಿಂತ ಹೆಚ್ಚಾದ ವೆಚ್ಚಗಳ ಪರಿಶೀಲನೆ ಮತ್ತು ಮಂಜೂರಾತಿ.
6. 2012-2013ನೇ ಸಾಲಿನ ಅಂದಾಜು ಆಯವ್ಯಯ ಪಟ್ಟಿಯ ಅಂಗೀಕಾರ
7. ಅಧ್ಯಕ್ಷರ ಅನುಮತಿ ಮೇರೆಗೆ ಮಹಾಸಭೆಯ ವ್ಯಾಪ್ತಿಗೆ ಒಳಪಟ್ಟು ಬರಬಹುದಾದ ಇತರ ವಿಷಯಗಳು. ಚರ್ಚೆಯ ವಿಷಯಗಳಿದ್ದರೆ ಸದಸ್ಯರು ಮಹಾಸಭೆಯ ದಿನಾಂಕದ ಐದು ದಿನಗಳ ಮೊದಲು ತಲುಪುವಂತೆ ಬರಹ ಮೂಲಕ ಸೊಸೈಟಿಯ ಅಧ್ಯಕ್ಷರಿಗೆ ಅಥವಾ ಕಾರ್ಯದರ್ಶಿಯವರಿಗೆ ಸೊಸೈಟಿಯ ಕಛೇರಿಯಲ್ಲಿ ಸಲ್ಲಿಸತಕ್ಕದ್ದು.

ಲಾಭಾಂಶ : 2005-2006ರಿಂದ 2010-2011ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದೇ ಇರುವ ಸದಸ್ಯರು ಸೊಸೈಟಿಯ ವ್ಯವಹಾರದ ವೇಳೆಯಲ್ಲಿ ಬಂದು ಪಡೆದುಕೊಳ್ಳಬಹುದು. 2005-06ನೇ ಸಾಲಿನ ಲಾಭಾಂಶ ಪಡೆದುಕೊಳ್ಳದೇ ಇದ್ದವರು ಅದನ್ನು ಪಡೆದುಕೊಳ್ಳಲು ಕೊನೆಯ ದಿನಾಂಕ 31-10-2012.







# KISHAN




MAIN ROAD, MAJOOR & BANTAKAL.



ಎಮ್. ದೇವಾನಂದ್ ಭಟ್
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ



ಬೆಳ್ವಾಯಿ-574213
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್
ಎಡಪದವು - 574 164
ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

## ದಿ/ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ, ಕುಳಾಯಿ ಪ್ರತಿಭಾ ಪುರಸ್ಕಾರ

2011-12ರ ಸಾಲಿನ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ 85%ಕ್ಕೂ ಹೆಚ್ಚು ಅಂಕಗಳಿಸಿ(ವಿಶಿಷ್ಟ ಶ್ರೇಣಿ) ತೇರ್ಗಡೆಯಾದ ಸರ್ವ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ, ಕರಂಗಲ್ಪಾಡಿ, ಮಂಗಳೂರು ಇಲ್ಲಿ ದಸರಾ ಪ್ರಯುಕ್ತ ನಡೆಯುವ ನಾಡಹಬ್ಬದಂದು ಮೇಲೆ ತಿಳಿಸಿದ ಪ್ರತಿಷ್ಠಾನದ ವತಿಯಿಂದ ಪುರಸ್ಕರಿಸಲಾಗುವುದು. ದಕ್ಷಿಣ ಕನ್ನಡ ಉಡುಪಿ ಜಿಲ್ಲೆಯ ಆಸಕ್ತ ಅರ್ಹ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರು ತಮ್ಮ ಅಂಕಪಟ್ಟಿಯ ಯಥಾ ನಕಲು.ವಿಳಾಸ, ದೂರವಾಣಿ ಸಂಖ್ಯೆ ಇತ್ಯಾದಿ ವಿವರಗಳನ್ನು ದಿನಾಂಕ 30-09-2012ರ ಒಳಗಾಗಿ ಈ ಕೆಳಗಿನ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ. ನಾಡ ಹಬ್ಬದ ದಿನಾಂಕವನ್ನು ಪತ್ರ ಮುಖೇನ ತಿಳಿಸಲಾಗುವುದು.

–**ಕೆ.ಸದಾಶಿವ ಶಾಸ್ತ್ರಿ**, 3-68(7), ಶ್ರೀ ವಿಷ್ಣು ಮೂರ್ತಿ ದೇವಸ್ಥಾನ ರಸ್ತೆ, ಕುಳಾಯಿ ಅಂಚೆ, ಮಂಗಳೂರು, 575019. ದೂ.0824-2408544

## ಶ್ರೀ ಸುಬ್ರಹ್ಮಣ್ಯ ಸಭಾ ಚ್ಯಾರಿಟೇಬಲ್ ಟ್ರಸ್ಟ್ (ರಿ.)

ಶ್ರೀ ಕುಡ್ಲು ವಿಷ್ಣು ಶ್ಯಾನುಭಾಗರು ತಮ್ಮ ಪತ್ನಿ ಶ್ರೀಮತಿ ಕುಡ್ಲು ಪ್ರೇಮಾವತಿ ಅಮ್ಮ ಸ್ಮಾರಕ ನಿಧಿಯನ್ನು ರೂ 75,000/- ವಂತಿಗೆಯೊಂದಿಗೆ ಸ್ಥಾಪಿಸಿ ವೈದ್ಯಕೀಯ ಶಿಕ್ಷಣ ಪಡೆಯುವ ನಮ್ಮ ಸಮಾಜದ ಓರ್ವ ವಿದ್ಯಾರ್ಥಿಗೆ ಪ್ರೋತ್ಸಾಹಧನವನ್ನು ಕೊಡಲು ಬಯಸಿದ್ದಾರೆ. ಅಂತೆಯೇ ಅವರು ತಮ್ಮ ಪುತ್ರ ಕುಡ್ಲು ಕೇಶವ ಶ್ಯಾನುಭಾಗರ ಸ್ಮಾರಕ ನಿಧಿಯನ್ನು ರೂ 60,000/- ವಂತಿಗೆಯೊಂದಿಗೆ ಸ್ಥಾಪಿಸಿ ಸಿ.ಎ ಕಲಿಯುವ ಸಮಾಜದ ಓರ್ವ ವಿದ್ಯಾರ್ಥಿಗೆ ಪ್ರೋತ್ಸಾಹಧನವನ್ನು ಕೊಡಲು ಬಯಸಿದ್ದಾರೆ.

2012-13ನೇ ಸಾಲಿನ ಮೇಲಿನ ಎರಡು ನಿಧಿಗಳ ಪಾರಿತೋಷಕವನ್ನು ಶ್ರೀ ಸಭೆಯು ಅಕ್ಟೋಬರ್ 2012ರಲ್ಲಿ ನಡೆಯುವ ನಾಡ-ಹಬ್ಬದ ಸಂಧರ್ಭದಲ್ಲಿ ವಿತರಿಸಲಿದೆ. ಆದುದರಿಂದ ಸಮಾಜದ ಅರ್ಹ ವಿದ್ಯಾರ್ಥಿಗಳ ಮೇಲಿನ ಪ್ರೋತ್ಸಾಹ ಧನಕ್ಕೆ ಅರ್ಜಿಯನ್ನು ಬರೆದು ದಿನಾಂಕ 30-9-2012 ಒಳಗೆ ತಲುಪುವಂತೆ ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇವರಿಗೆ ಕಳುಹಿಸಿ ಕೊಡಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯನ್ನು ಲಗ್ತೀಕರಿಸಬೇಕು.

**–ಕರುಣ್‌ರಾವ್ ಬೆಳ್ಳೆ, ಕಾರ್ಯದರ್ಶಿ**

## ಶ್ರೀ ಸುಬ್ರಹ್ಮಣ್ಯ ಸಭಾ ಚ್ಯಾರಿಟೇಬಲ್ ಟ್ರಸ್ಟ್ (ರಿ.)

2012-13ನೇ ಸಾಲಿನಲ್ಲಿ ಪಿ.ಯು.ಸಿ ಮತ್ತು ಮೇಲ್ಪಟ್ಟ ತರಗತಿಯಲ್ಲಿ ಕಲಿಯುವ ಸಮಾಜದ ಆರ್ಥಿಕವಾಗಿ ಹಿಂದಿರುವ ಕುಟುಂಬಗಳಿಂದ ಬರುವ ಅರ್ಹ ವಿದ್ಯಾರ್ಥಿಗಳಿಂದ ಸಾಮಾನ್ಯ ವಿದ್ಯಾರ್ಥಿ ವೇತನವನ್ನು ಪಡೆಯಲು ದಿನಾಂಕ 30-10-2012ರ ಒಳಗೆ ತಲುಪುವಂತೆ ಅರ್ಜಿಯನ್ನು ಕಾರ್ಯದರ್ಶಿ, ಶ್ರೀ. ಸುಬ್ರಹ್ಮಣ್ಯ ಸಭಾ ಮಂಗಳೂರು ಇವರಿಗೆ ಕಳುಹಿಸಿ ಕೊಡಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿ ಹಾಗೂ ಈ ವರ್ಷದ ಕಲಿಕಾ ಪ್ರಮಾಣ ಪತ್ರವನ್ನು ಲಗ್ತಿಕರಿಸಬೇಕು.

ಅರ್ಜಿ ಫಾರ್ಮುಗಳು ದೊರೆಯುವ ವಿಳಾಸಗಳು ಈ ಕೆಳಗಿನಂತಿವೆ :

1) ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ, ಮಂಗಳೂರು ಹಾಗೂ ಪುತ್ತೂರು ಶಾಖೆ.
2) ಶ್ರೀ ಕೆ ಹರ್ಷಕುಮಾರ್, ಪ್ರಮೋದ್ ಆಟೋಮೊಬೈಲ್, ಕರಂಗಲ್ಪಾಡಿ, ಮಂಗಳೂರು.
3) ಶ್ರೀ ಬಿ.ಎಸ್. ಅನಿಲ್ ರಾವ್, ವಿಶ್ರಾಮ್ ಮೋಟಾರ್ಸ, ಕೊಡಿಯಾಲ್‌ಬೈಲ್ ಮಂಗಳೂರು.
4) ಶ್ರೀ ಉಮೇಶ್ ಶಾನ್‌ಭಾಗ್, ಮೂಕಾಂಬಿಕಾ ಟಿಂಬರ್ಸ್, ಕಿರಿಮಂಜೇಶ್ವರ ಕುಂದಾಪುರ.
5) ಶ್ರೀ ಭೋಜರಾವ್, ಸುಲಗ್ನ ಮಾಸಪತ್ರಿಕೆ, ಕುಕ್ಕಿಕಟ್ಟೆ, ಉಡುಪಿ.
6) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ.
7) ಶ್ರೀ ಜ್ಞಾನಶಕ್ತಿಸುಬ್ರಹ್ಮಣ್ಯ ದೇವಸ್ಥಾನ, ಪಾವಂಜೆ.
8) ಶ್ರೀ ಶಾಲಿಪುರ ಸುಬ್ರಹ್ಮಣ್ಯ ದೇವಸ್ಥಾನ, ಕೊಕ್ರಾಡಿ, ಬೆಳ್ತಂಗಡಿ ತಾಲೂಕು.
9) ಶ್ರೀ ಎಮ್.ಎಸ್. ಅರುಣ್ ಕುಮಾರ್, ದಿಶಾಬೇಕರಿ, ಉಜಿರೆ.
10) ಶ್ರೀ ದೇವಾನಂದ ಭಟ್, ಅಧ್ಯಕ್ಷರು, ಆದಿಶಂಕರ ಬ್ರಾಹ್ಮಣಸಭಾ, ಮೂಡುಬಿದ್ರೆ.
11) ಶ್ರೀ ಎಮ್.ರಾಮಮೋಹನ್ ರಾವ್, ಅಧ್ಯಕ್ಷರು, ಶಂಕರ ಪ್ರತಿಷ್ಠಾನ, ಕಾರ್ಕಳ.
12) ಶ್ರೀ ಎಮ್.ಕೆ ಮೋಹನ್ ರಾವ್, ಅಧ್ಯಕ್ಷರು, ಸ್ಥಾನಿಕಬ್ರಾಹ್ಮಣ ಸಂಘ, ಪಡುಬಿದ್ರೆ.
13) ಶ್ರೀ ಎಮ್.ಎಸ್.ರಘುನಾಥ ರಾವ್, ರಾಜೇಶ ಪವರ್ ಪ್ರೆಸ್, ದರ್ಬೆ, ಪುತ್ತೂರು.
14) ಶ್ರೀ ಎನ್.ಎಸ್.ನಟರಾಜ್, ಪುತ್ತೂರು.
15) ಡಾ.ಸದಾಶಿವ ರಾವ್, ಜ್ಯೋತಿ ಆಸ್ಪತ್ರೆ, ಸುಳ್ಯ.
16) ಶ್ರೀ.ಬಿ ಭಾಸ್ಕರ್ ರಾವ್, ಬಾಯಂಬು, ಸುಳ್ಯ.

**–ಕರುಣ್‌ರಾವ್ ಬೆಳ್ಳೆ, ಕಾರ್ಯದರ್ಶಿ**

# ಒಳ್ಳೆಯ ಹವ್ಯಾಸ-ಅಂಚೆ ಚೀಟಿ ಸಂಗ್ರಹಣ

ಲೇಖನ : ವೈ. ಮೋಹನ ರಾವ್

ಇಂದು ವ್ಯಾಪಕವಾಗಿ ಹಬ್ಬಿರುವ ಅಂಚೆ ಚೀಟಿ ಸಂಗ್ರಹಣಾ ಹವ್ಯಾಸ 'ಫಿಲಾಟೆಲಿ' ಎಂದೇ ಜನಪ್ರಿಯವಾಗಿ ಮನೆ ಮಾತಾಗಿದೆ. ಒಂದು ಜಾಗತಿಕ ಹವ್ಯಾಸವಾದ ಈ ಅಂಚೆ ಚೀಟಿ ಸಂಗ್ರಹ ಬಹಳ ಉಪಯುಕ್ತವೂ ಆಸಕ್ತಿಯುತವೂ ಆಗಿದೆ. ಅನೇಕ ದೃಷ್ಟಿಕೋನಗಳಿಂದ ಅಂಚೆ ಚೀಟಿಗಳನ್ನು ಸಂಗ್ರಹಿಸಬಹುದಾದ ಈ ಹವ್ಯಾಸ ಅತ್ಯುತ್ತಮ ಹವ್ಯಾಸವೆಂದೇ ಇತ್ತೀಚೆಗಿನ ದಿನಗಳಲ್ಲಿ ಪರಿಗಣಿಸಲ್ಪಟ್ಟಿದೆ.

ಕಾಗದ ಪತ್ರಗಳ ಸಾಗಾಣಿಕೆಯ ಬೆಲೆಯನ್ನು ಸೂಚಿಸುವ ಅಂಚೆಚೀಟಿಗಳು ಅಂಚೆ ವ್ಯವಸ್ಥೆಯ ಒಂದು ಪ್ರಮುಖ ಅಂಗ. ಆದ್ದರಿಂದ ಪ್ರತಿಯೊಂದು ದೇಶವೂ ತನ್ನದೇ ಆದ ಅಂಚೆ ಚೀಟಿಗಳನ್ನು ಆಗಾಗ ಮುದ್ರಿಸುತ್ತದೆ. ಅಂಚೆ ಚೀಟಿಗಳನ್ನು ಹೊರತರುವಲ್ಲಿ ಒಂದು ಉದ್ದೇಶ ವಿದ್ದೇ ಇರುತ್ತದೆ. ಅಂಚೆ ಚೀಟಿಗಳನ್ನು ಮುಖ್ಯವಾಗಿ ಎರಡು ವಿಧಗಳಾಗಿ ವಿಂಗಡಿಸಬಹುದು.

1. ನಿತ್ಯೋಪಯೋಗಿ ವಾಡಿಕೆಯ ಅಂಚೆ ಚೀಟಿಗಳು. 2. ಸ್ಮಾರಕ ವಿಶೇಷ ಅಂಚೆ ಚೀಟಿಗಳು.

ನಿತ್ಯೋಪಯೋಗಿ ವಾಡಿಕೆಯ ಅಂಚೆ ಚೀಟಿಗಳನ್ನು ನಿರ್ದಿಷ್ಟವಾದ ಅಂಚೆ ಚೀಟಿಗಳು ಎಂದೂ ಕರೆಯುತ್ತಾರೆ. (ಡೆಫಿನಿಟಿವ್) ಇವು ಆಕಾರದಲ್ಲಿ ವಿಶೇಷ ಅಂಚೆ ಚೀಟಿಗಳಿಗಿಂತ ಚಿಕ್ಕದಾಗಿರುತ್ತವೆ. ಅನೇಕ ವರ್ಷ ಈ ಅಂಚೆ ಚೀಟಿಗಳು ಪ್ರಚಲಿತವಿರುತ್ತವೆ. ಸಂಗ್ರಹ ಮುಗಿದರೆ ಪುನಃ ಮುದ್ರಿಸಲ್ಪಡುತ್ತವೆ. ಈ ಅಂಚೆ ಚೀಟಿಗಳ ವಿನ್ಯಾಸವನ್ನೂ ಬದಲಾಯಿಸಬಹುದು.

ಸ್ಮಾರಕ ಅಂಚೆ ಚೀಟಿಗಳು ವಿಶೇಷ ಸಂದರ್ಭಗಳ ಸ್ಮರಣಾರ್ಥವಾಗಿ ಮುದ್ರಿಸಲ್ಪಡುತ್ತವೆ. ಸಂಗ್ರಹ ಮುಗಿದ ಮೇಲೆ ವಿಶೇಷ ಅಂಚೆ ಚೀಟಿಗಳು ಮುದ್ರಿಸಲ್ಪಡುವುದಿಲ್ಲ. ಇವು ಕಲಾತ್ಮಕವಾಗಿಯೂ ಬಹು ವರ್ಣರಂಜಿತವಾಗಿಯೂ ಮುದ್ರಿಸಲ್ಪಡುತ್ತವೆ. ವ್ಯಕ್ತಿ ಅಥವಾ ಘಟನೆ ಸಂಸ್ಮರಣಾರ್ಥ ಅಂಚೆ ಚೀಟಿಗಳೇ ಸಂಗ್ರಹಕಾರರಿಗೆ ಬೇಕಾಗುವುದು.



ಚಿತ್ರಗಳು : ಎಂ.ಕೆ.ಕೃಷ್ಣಯ್ಯನವರ ಸಂಗ್ರಹ

ಅಂಚೆ ಚೀಟಿಗಳ ಮೇಲೆ ನಿರೂಪಿಸಿದಂತಹ ವಿಷಯವಾಗಲೀ ಕಾರ್ಯವಾಗಲೀ ವೈವಿಧ್ಯಮಯವಾದದ್ದು. ಇತಿಹಾಸ, ಕಲೆ, ಸಂಸ್ಕೃತಿ, ರಾಷ್ಟ್ರನಾಯಕರು, ವೀರಮಹಿಳೆಯರು, ರಾಜರಾಣಿಯರು, ಚಿಟ್ಟೆಗಳು, ಮೀನುಗಳು, ಪಕ್ಷಿಗಳು, ಪ್ರಾಣಿಗಳು, ಔಷಧ, ಪ್ರಕೃತಿ ಸೌಂದರ್ಯ, ಸಂಪರ್ಕ ಸಾಧನ, ಭೌಗೋಳಿಕ ಅಂಶಗಳು, ಕೈಗಾರಿಕೆ, ವನ್ಯಜೀವಿಗಳು, ಧರ್ಮಗಳು, ಪುರಾತನ ವಾಸ್ತುಶಿಲ್ಪ, ನೃತ್ಯ, ಪುಷ್ಪಗಳು, ವರ್ಣಚಿತ್ರಗಳು, ಕ್ರೀಡೆಗಳು, ರೈಲುಗಳು, ನೌಕೆಗಳು, ನಾಣ್ಯಪದ್ಧತಿ, ಬಾಹ್ಯಾಕಾಶ, ಏರ್‌ಮೈಲ್, ದೇಶದ ಯೋಜನೆಗೆ ಸಂಬಂಧಿಸಿದ ವಿಷಯಗಳು, ಮಕ್ಕಳಿಗೆ ಸಂಬಂಧಿಸಿದ ಸಾಮಾಜಿಕ ಹಾಗೂ ಶೈಕ್ಷಣಿಕ ವಿಷಯಗಳು, ಕುಟುಂಬ ಯೋಜನೆ, ಬುದ್ಧಿಜೀವಿಗಳು, ವಿಜ್ಞಾನಿಗಳು, ಸಾಹಿತಿಗಳು, ಕಲಾವಿದರು ಇದೇ ಮೊದಲಾದ ಸಂಗತಿಗಳಿಗೆ ಸಂಬಂಧಿಸಿದ ವರ್ಣರಂಜಿತ ಆಕರ್ಷಕ ಅಂಚೆ ಚೀಟಿಗಳು ಮುದ್ರಿಸಲ್ಪಡುತ್ತವೆ. ಆದ್ದರಿಂದ ಅಂಚೆ ಚೀಟಿಗಳ ಸಂಪುಟ (ಆಲ್ಬಮ್) ಸಂಗ್ರಹಕಾರರಿಗೆ, ಅಧ್ಯಯನ ಶೀಲರಿಗೆ ಸಂಶೋಧಕರಿಗೆ ಅನೇಕ ವಿಷಯಗಳ ಪರಿಚಯ ಮಾಡಿಕೊಡುವ ಸಣ್ಣ ವಿಶ್ವಕೋಶವೆಂದೇ ಹೇಳಬಹುದು. ಒಂದು ನಿರ್ದಿಷ್ಟ ವಿಷಯದ ಬಗ್ಗೆ ಸಂಗ್ರಹಿಸಿದ ಅಂಚೆಚೀಟಿಗಳ ಸಂಪುಟ ಒಂದು ವಿಷಯದ ಬಗ್ಗೆ ವಿಶೇಷ ಜ್ಞಾನವನ್ನೊದಗಿಸುವ ಪುಸ್ತಕವೆಂದೇ ಹೇಳಬಹುದು.

ಅಂಚೆ ಚೀಟಿಗಳ ಮೇಲೆ ಮುದ್ರಿತವಾಗಿರುವ ಚಿತ್ರಗಳು ಎಷ್ಟೋ ಕಥೆಗಳನ್ನೇ ಹೇಳುತ್ತವೆ. ಸುಂದರವಾದ, ಕಲಾತ್ಮಕವಾದ ಹಾಗೂ ಬಣ್ಣಬಣ್ಣದ ಅಂಚೆಚೀಟಿಗಳು ಮಕ್ಕಳನ್ನು ಬಹಳವಾಗಿ ಆಕರ್ಷಿಸುತ್ತವೆ. ಅಕ್ಷರಾಭ್ಯಾಸ ಮಾಡುವ ಸಣ್ಣ ಮಕ್ಕಳಿಗೆ ಪಠ್ಯಪುಸ್ತಕಗಳಲ್ಲಿ ಆಯಾಯ ಅಕ್ಷರಕ್ಕೆ ಸರಿಯಾಗಿ ಅಂಚೆಚೀಟಿ ಚಿತ್ರವನ್ನು ಮುದ್ರಿಸಿದರೆ ತುಂಬಾ ಫಲಕಾರಿಯಾಗಬಲ್ಲದು. ಒಂದು ಚಿತ್ರವು ನೂರು ಶಬ್ದಗಳಿಗೆ ಸಮಾನ ಎಂಬ ಮಾತಿನಂತೆ ಅಂಚೆಚೀಟಿಗಳು ಜ್ಞಾನವರ್ಧನೆಗೆ ಸುಲಭ ಸಾಧನವಾಗಿದೆ. ಈ ಶೈಕ್ಷಣಿಕ ಮೌಲ್ಯ ಅಪಾರವಾಗಿದೆ.

ಪಾಶ್ಚಾತ್ಯ ದೇಶಗಳಲ್ಲಿ 80% ವಿದ್ಯಾರ್ಥಿಗಳು ಅಂಚೆಚೀಟಿ ಸಂಗ್ರಹದ ಅಭಿರುಚಿಯನ್ನು ಹೊಂದಿದ್ದಾರೆ ಎಂದು ಅಂದಾಜು ಮಾಡಲಾಗಿದೆ. ಆಸಕ್ತಿಯುಳ್ಳ ವಿಷಯವನ್ನು ಆರಿಸಿ ಆ ವಿಷಯದ ಬಗ್ಗೆ ಬೇರೆ ಬೇರೆ ದೇಶಗಳು ಹೊರಡಿಸಿದ ಅಂಚೆ ಚೀಟಿಗಳನ್ನು ಪಡೆಯುವ ಪ್ರಯತ್ನ ಮತ್ತು ಪರಿಶ್ರಮ ಒಂದು ಸಾಧನೆಯೇ ಸರಿ. ಆದ್ದರಿಂದ ಶಾಲಾ ಕಾಲೇಜು ವಿದ್ಯಾರ್ಥಿಗಳು ಈ ಹವ್ಯಾಸವನ್ನು ಮೈಗೂಡಿಸಿಕೊಂಡಿದ್ದರೆ ಶಿಸ್ತು ಮತ್ತು ಸಂಯಮ ತಾನಾಗಿಯೇ ಅವರಲ್ಲಿ ಬೆಳೆಯುತ್ತವೆ. ತಾಳ್ಮೆ ಮತ್ತು ಜಾಗರೂಕತೆ ಮತ್ತು ವಿಶಾಲ ಮನೋಭಾವವನ್ನು ಪೋಷಿಸುತ್ತವೆ. ಈ ಹವ್ಯಾಸದಿಂದ ಸೃಜನಶೀಲ ಚಟುವಟಿಕೆಗಳತ್ತ ಅವರ ಗಮನ ಸೆಳೆಯಲು ಸಹಾಯಕವಾಗುತ್ತದೆ. ಮನುಷ್ಯನಲ್ಲಿರುವ ಒಂದು ಮೂಲ ಪ್ರವೃತ್ತಿಯಾದ ಸಂಗ್ರಹ ಪ್ರವೃತ್ತಿ ಈ ಹವ್ಯಾಸದಿಂದ ತೃಪ್ತಿಗೊಳ್ಳುತ್ತದೆ. ಸಾಧನೆಯ ಪ್ರವೃತ್ತಿ ಮತ್ತು ಪ್ರತಿಷ್ಠೆಯ ಗುಣಗಳೂ ಸಂತೃಪ್ತಿ ಪಡೆಯುತ್ತವೆ. ಆದ್ದರಿಂದ ಆಹ್ಲಾದವನ್ನು ಒದಗಿಸುವ ಪರಿಣಾಮಕಾರೀ ಸಾಧನ ಈ ಹವ್ಯಾಸ. ಈ ಹವ್ಯಾಸವಿದ್ದ ವಿದ್ಯಾರ್ಥಿಗಳ ಬುದ್ಧಿಮಟ್ಟವೂ ಹೆಚ್ಚಾಗಿರುತ್ತದೆ ಎಂದೂ ತಿಳಿಸಲಾಗಿದೆ.

ಅಂಚೆಚೀಟಿ (ಸ್ಟಾಂಪು) ಸಂಗ್ರಹಣೆಯು ಕೆಲವೊಮ್ಮೆ ಅನಿರೀಕ್ಷಿತವಾಗಿ ಲಾಭದಾಯಕವೂ ಆಗಬಹುದು. ಅದೃಷ್ಟವನ್ನೂ ತರಬಹುದು. ಸಂಗ್ರಹದಲ್ಲಿರುವ ಅಂಚೆಚೀಟಿ ಒಂದು ದಿನ ಅತ್ಯಮೂಲ್ಯವಾದ ಆಸ್ತಿಯಾಗಬಹುದು. ಅತ್ಯಂತ ಅಪರೂಪದ ಮತ್ತು ಹಳೆಯ ಅಂಚೆಚೀಟಿ ಕೆಲವೊಮ್ಮೆ ವಿಪರೀತ ಬೆಲೆಯನ್ನು ಪಡೆದು ಮಾರಾಟವಾಗಬಹುದು. ಆದ್ದರಿಂದ ಅಂಚೆಚೀಟಿ ಸಂಗ್ರಹಣಾ ಹವ್ಯಾಸ ಒಂದು ಬಹೂಪಯೋಗಿ ಹಾಗೂ ಅತ್ಯಮೂಲ್ಯ ಹವ್ಯಾಸವಾಗಿದೆ.

## ನಿಧನ

### ಪಣಂಬೂರು ಶಿವರಾವ್

ನಿವೃತ್ತ ಮುಖ್ಯೋಪಾಧ್ಯಾಯ ಹಿರಿಯ ಕಲಾವಿದ ಪಣಂಬೂರು ಶಿವರಾವ್ (82) ಕೃಷ್ಣಾಪುರ ನಾಲ್ಕನೇ ವಿಭಾಗದ ಸ್ವಗೃಹದಲ್ಲಿ ಜು. 30 ರಂದು ನಿಧನ ಹೊಂದಿದರು. ಅವರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ಕಾರ್ಕಳದಲ್ಲಿ ಶಿಕ್ಷಕರಾಗಿ ಕರ್ತವ್ಯ ಆರಂಭಿಸಿದ್ದ ಅವರು ಮಂಗಳೂರು ತಾಲೂಕಿನ ವಿವಿಧ ಸರಕಾರಿ ಶಾಲೆಗಳಲ್ಲಿ ಶಿಕ್ಷಕರಾಗಿ ಕಾರ್ಯ ನಿರ್ವಹಿಸಿದ್ದರು. ಬೈಕಂಪಾಡಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸುಮಾರು 20 ವರ್ಷ ಶಿಕ್ಷಕ ಮತ್ತು ಮುಖ್ಯೋಪಾಧ್ಯಾಯರಾಗಿ ನಿವೃತ್ತಿ ಹೊಂದಿದ್ದರು. ಯಕ್ಷಗಾನ ಹಿಮ್ಮೇಳ ಕಲಾವಿದ ಹಾಗೂ ಹವ್ಯಾಸಿ ನಾಟಕ ಕಲಾವಿದ, ನಿರ್ದೇಶಕರಾಗಿದ್ದ ಅವರು ಪಣಂಬೂರು, ಚಿತ್ರಾಪುರ, ಸುರತ್ಕಲ್ ಪರಿಸರದ ಅನೇಕ ತಂಡಗಳಿಗೆ ನಾಟಕಗಳನ್ನು ನಿರ್ದೇಶಿಸಿದ್ದರು. ಉತ್ತಮ ಸಂಘಟಕರಾಗಿದ್ದ ಅವರು ವಿವಿಧ ಸಂಘ ಸಂಸ್ಥೆಗಳಲ್ಲಿ ಪದಾಧಿಕಾರಿಯಾಗಿದ್ದರು.

ಅವರನ್ನು ಹಲವು ಸಂಘ ಸಂಸ್ಥೆಗಳು ಸನ್ಮಾನಿಸಿದ್ದವು. ಉತ್ತಮ ಬರಹಗಾರರಾಗಿದ್ದ ಅವರು ಕಲಾ ವಿಮರ್ಶಕರೂ ಆಗಿದ್ದರು.

ಅವರ ನಿಧನಕ್ಕೆ ಕಲಾವಿದ ಪ್ರಭಾಕರ ಜೋಷಿ, ಉಪನ್ಯಾಸಕ ಕೃಷ್ಣಮೂರ್ತಿ ಸಂತಾಪ ವ್ಯಕ್ತಪಡಿಸಿದ್ದಾರೆ.

★★★ ★★★

### ಶ್ರೀ ಎ. ಪದ್ಮನಾಭ ರಾಯರು

ಅದ್ಯಪಾಡಿ ಸಂಕೇಶ ಕೋಡಿಯಲ್ಲಿರುವ ಶ್ರೀ ಎ. ಪದ್ಮನಾಭ ರಾಯರು ದಿನಾಂಕ 14-07-2012ರಂದು ನಿಧನರಾದರು ಮೃತಕಾಲಕ್ಕೆ ಅವರಿಗೆ 90 ವರ್ಷ ಪ್ರಾಯವಾಗಿತ್ತು. ಅವರು ಪತ್ನಿ, ಐವರು ಪುತ್ರರನ್ನು, ಓರ್ವ ಪುತ್ರಿಯನ್ನು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ.

★★★ ★★★

### ಸತೀಶ್ಚಂದ್ರ ಶ್ಯಾನುಭೋಗ್

ಬೆಂಗಳೂರು ನಿವಾಸಿ ಶ್ರೀ ಬಾಬು ರಾಯ ಶ್ಯಾನುಭೋಗ್ ಇವರ ತಮ್ಮ ಸತೀಶ್ಚಂದ್ರ ಶ್ಯಾನುಭೋಗ್ (65) ಇವರು ತಾ.13-08-2012 ರಂದು ನಿಧನರಾದರು. ಇವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

★★★ ★★★

### ಕೃಷ್ಣ ರಾವ್

ಪರೀಕ ದಿ| ರಾಮರಾವ್ ಇವರ ಮಗ ಹೊಟೇಲ್ ಉದ್ಯಮಿ, ಕೃಷ್ಣ ರಾವ್ (82) ಇವರು ತಾ.19-8-2012ರಂದು ನಿಧನರಾದರು. ಇವರು ಓರ್ವ ಪುತ್ರ, ಐವರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

### ಕೋಲ್ಪೆ ಶ್ರೀನಿವಾಸ್ ರಾವ್

ಮಂಗಳೂರು ಕೋಡಿಕಲ್ ನಿವಾಸಿ ಕೋಲ್ಪೆ ಶ್ರೀನಿವಾಸ್ ರಾವ್ ಇವರು ಅಲ್ಪಕಾಲದ ಅಸೌಖ್ಯದಿಂದ 05-09-2012 ರಂದು ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಇವರಿಗೆ 63 ವರ್ಷ ಪ್ರಾಯವಾಗಿತ್ತು. ಇವರು ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ.

## ಕಡಬ : ವೇದಪಾಠಶಾಲೆ ಪ್ರಾರಂಭ

ಇತ್ತೀಚಿಗೆ ಉಡುಪಿಯಲ್ಲಿ ಜರಗಿದ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶದಲ್ಲಿ ಕೈಗೊಂಡ ನಿರ್ಣಯದಂತೆ ಅಲ್ಲಲ್ಲಿ ವೇದಪಾಠಶಾಲೆ ಆರಂಭಿಸ ಬೇಕೆಂದು ತೀರ್ಮಾನ ಕೈಗೊಂಡಂತೆ ಕಡಬದಲ್ಲಿ ಶ್ರೀ ಕೆ.ಗೋಪಾಲ ರಾವ್ ಮತ್ತು ಶ್ರೀ ಕೆ. ಅರುಣ ಕುಮಾರ್ ಜೆಡೆಮನೆ ಇವರ ನೇತೃತ್ವದಲ್ಲಿ ವೇದಪಾಠ ಶಾಲೆಯೊಂದನ್ನು ಆರಂಭಿಸ ಲಾಯಿತು. ಈ ವೇದಪಾಠ ಶಾಲೆಯು ಜೆಡೆ ಮನೆ ಅರುಣಕುಮಾರ್ ಇವರ ಮನೆಯಲ್ಲಿ ಆರಂಭಿಸಿದ್ದು, ಬದೆಂಜ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಪ್ರಧಾನ ಅರ್ಚಕರಾದ ಶ್ರೀ ಅಜಯ ಶರ್ಮಾರವರು ಕಲಿಸುತ್ತಿದ್ದಾರೆ. ಮಕ್ಕಳು ಮತ್ತು ದೊಡ್ಡವರಿಗೆ ಪ್ರತ್ಯ ಪ್ರತ್ಯೇಕ ತರಗತಿ ನಡೆಯುತ್ತಿದ್ದು ಸುಮಾರು 22 ಮಂದಿ ತರಗತಿಗೆ ಬರುತ್ತಿದ್ದಾರೆ.

ದಿನಾಂಕ 18-8-2012ರಂದು ಶನಿವಾರ ಸ್ಥಾನಿಕ ಬ್ರಾಹ್ಮಣ ವೈದಿಕರ ವೇದಿಕೆಯ ಅಧ್ಯಕ್ಷರಾದ ಬ್ರಹ್ಮಶ್ರೀ, ವೇದಮೂರ್ತಿ ತಂತ್ರಿಗಳಾದ ಪಾವಂಜೆ ಶ್ರೀ ವಾಗೀಶ ಶಾಸ್ತ್ರಿಯವರು ಆಗಮಿಸಿ ಸೂಕ್ತ ಸಲಹೆ ಸೂಚನೆ ನೀಡಿದರಲ್ಲದೆ ಸುಮಾರು 22 ಜನರಿಗೆ ಮಂತ್ರೋಪದೇಶ ನೀಡಿ ಹರಸಿದರು. ಎಲ್ಲರ ಪರವಾಗಿ ತಂತ್ರಿಗಳಿಗೆ ಫಲ, ಕಾಣಿಕೆ ನೀಡಿ ಗೌರವಿಸಲಾಯಿತು.

**-ಶ್ರೀಮತಿ ವಾಣಿ, ಜೆಡೆಮನೆ, ಕಡಬ**

## ವಿಳಾಸ ಬದಲಾವಣೆ

## ಸುಹಾಸ್ ಟಿ. ಶ್ಯಾನುಭಾಗ್



ಸುಹಾಸ್ ಟಿ. ಶ್ಯಾನುಭಾಗ್ ಇವರು ಏಪ್ರಿಲ್ 2012ರ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 612 ಅಂಕ (97.92%) ಗಳಿಸಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆ ಯಾಗಿರುತ್ತಾರೆ. ಇವರು ಪ್ರಸ್ತುತ ಹಾಸನದಲ್ಲಿ ಟೆಲಿಕಾಂ ವಿಭಾಗದ ಉನ್ನತ ಹುದ್ದೆಯಲ್ಲಿರುವ ತಂತ್ರಾಡಿ ದೇವರಾಜ ಶ್ಯಾನುಭಾಗ್ ಹಾಗೂ ಸುಮಂಗಲಿ ಶ್ಯಾನುಭಾಗ್ ಇವರ ಪುತ್ರ. ಇವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

ಡಾ| ವೈ. ಸುದರ್ಶನ ರಾವ್

**ಪ್ರಶ್ನೆ: ಬಾಯಿಯಲ್ಲಿ ಹುಣ್ಣುಗಳಾಗಲು ಕಾರಣಗಳೇನು? ಇದರ ಚಿಕಿತ್ಸೆ ಹೇಗೆ?**

ಬಾಯಿಯಲ್ಲಿ ಹುಣ್ಣುಗಳಾಗುವುದು ಅತ್ಯಂತ ಸಾಮಾನ್ಯವಾದ ಕಾಯಿಲೆ. ಈ ರೀತಿ ಹುಣ್ಣುಗಳಾಗುವುದಕ್ಕೆ ನೂರಾರು ಕಾರಣಗಳಿವೆ. ಅತ್ಯಂತ ಮಾಮೂಲಿಯಾದ ಕಾರಣವೆಂದರೆ ಹಲ್ಲುಗಳು ತಾಗಿ ಗಾಯವಾಗುವುದು. ಇನ್ನು ಕೆಲವರಿಗೆ ಅವುಡು ಕಚ್ಚುವ ಅಭ್ಯಾಸವಿರುತ್ತದೆ. ಇನ್ನು ಕೆಲವರಿಗೆ ಚೂಪಾದ ಹಲ್ಲು ಇದ್ದರೆ ಅದಕ್ಕೆಯಾವಾಗಲು ನಾಲಗೆಯನ್ನು ಸವರುವ ಅಭ್ಯಾಸವಿರುತ್ತದೆ. ಇನ್ನು ಕೆಲವೊಮ್ಮೆ ಈ ಗಾಯಗಳು ಆಹಾರವನ್ನು ಜಗಿಯುವಾಗ, ಮಾತನಾಡುವಾಗ ಅಕಸ್ಮಾತ್ತಾಗಿ ಆಗಬಹುದು. ಇನ್ನು ಕೆಲವೊಮ್ಮೆ ರಾಸಾಯನಿಕ ಪದಾರ್ಥಗಳಿಂದಲೂ ಆಗಬಹುದು. ಇನ್ನು ಕೆಲವೊಮ್ಮೆ ಯಾವ ರೀತಿ ಗಾಯವಾಯಿತೆಂಂದು ತಿಳಿಯಿವುದೇ ಇಲ್ಲ. ಹೀಗೆ ಗಾಯಗಳಾಗಿ ಆದ ಹುಣ್ಣುಗಳು ಸುಮಾರು ನಾಲ್ಕೈದು ದಿನಗಳಲ್ಲಿ ತನ್ನಿಂತಾನಾಗಿಯೇ ಗುಣವಾಗುತ್ತವೆ.

ಇನ್ನು ಕೆಲವರಲ್ಲಿ ಅದೂ ಸುಮಾರು ಹದಿನೈದರಿಂದ ನಲುವತ್ತು ವರ್ಷ ಪ್ರಾಯದವರಲ್ಲಿ ತನ್ನಿಂತಾನಾಗಿಯೇ ಬಾಯಿಯಲ್ಲಿ ಏಕ ಕಾಲಕ್ಕೆ ಅನೇಕ ಸಣ್ಣ ಸಣ್ಣ ಹುಣ್ಣುಗಳಾಗುತ್ತದೆ. ಈ ಹುಣ್ಣುಗಳಲ್ಲಿ ತುಂಬಾ ನೋವಿದ್ದು ಮಾತನಾಡಲು, ನುಂಗಲು ಕಷ್ಟವಾಗುತ್ತದೆ. ಈ ಹುಣ್ಣುಗಳು ವಾರದೊಳಗೆ ತನ್ನಿಂತಾನಾಗಿಯೇ ಗುಣವಾದರೂ ಸ್ವಲ್ಪ ಸಮಯದ ನಂತರ ಮರುಕಳಿಸುತ್ತವೆ. ಈ ತರದ ಹುಣ್ಣುಗಳನ್ನು ಆಪ್ತಸ್ ಅಲ್ಸರ್ ಎಂದು ಕರೆಯುತ್ತಾರೆ. ಈ ಹುಣ್ಣುಗಳು ಕೆಲವು ಔಷಧಿಗಳ ಸೇವನೆ, ನಿದ್ರೆಗೆಡುವುದು, ಮಾನಸಿಕ ಒತ್ತಡ , ದೈಹಿಕ ಶ್ರಮ, ಬಾಯಿಯ ಸ್ವಚ್ಛತೆಗೆ ಗಮನ ಕೊಡದಿರುವುದು , ಹೀಗೆ ಅನೇಕ ಕಾರಣ ಗಳಿಂದ ಆಗುತ್ತವೆ. ಪೌಷ್ಠಿಕ ಆಹಾರದ ಸೇವನೆ ,ಪದೇ ಪದೇ ಬಿಸಿ ನೀರಿನಿಂದ ಬಾಯಿ ಮುಕ್ಕಳಿಸುವುದು ಹಾಗೂ ವಿಟಮಿನ್ ಮಾತ್ರೆಗಳ ಸೇವನೆಯಿಂದ ಈ ಹುಣ್ಣುಗಳು ಗುಣವಾಗುತ್ತದೆ.

ವಿಟಮಿನ್ ಕೊರತೆ, ರಕ್ತಹೀನತೆ, ಯಾವುದೇ ತೀವ್ರ ಖಾಯಿಲೆಯಿಂದ ಬಳಲುತ್ತಿರುವ ಸಂದರ್ಭಗಳಲ್ಲಿ ಬಾಯಿಯಲ್ಲಿ ಸಣ್ಣ ಸಣ್ಣ ಹುಣ್ಣುಗಳಾಗುತ್ತದೆ. ಈ ಹುಣ್ಣುಗಳಲ್ಲಿ ನೋವಿರುವುದು ಮಾತ್ರವಲ್ಲ ಅದರೊಂದಿಗೆ ನಾಲಗಯ ಮೇಲ್ಮೈ ಸಾಮಾನ್ಯವಾಗಿ ದೊರಗಿರಬೇಕಾದದ್ದು ನುಣ್ಣಗೆ ಕಾಣುತ್ತದೆ. ಇದಕ್ಕೆ ವಿಟಮಿನ್ ಮಾತ್ರೆಗಳು, ಕಬ್ಬಿಣ ಸತ್ವದ ಗುಳಿಗೆಗಳು ಹಾಗೂ ಪೌಷ್ಠಿಕ ಆಹಾರವೇ ಮದ್ದು.

ಕ್ಯಾನ್ಸರ್ ನಿಂದ ಬಾಯಿಯಲ್ಲಿ ಹುಣ್ಣುಗಳಾಗುವುದು ಇನ್ನೊಂದು ಮುಖ್ಯ ಕಾರಣವೆನ್ನಬಹುದು . ತಂಬಾಕು ಹಾಗೂ ಸಿಗರೇಟು ಸೇವನೆ, ಗುಹ್ಯರೋಗಗಳು, ಮದ್ಯಪಾನ, ಒಂದೇ ಜಾಗದಲ್ಲಿ ಪದೇ ಪದೇ ಹಲ್ಲು ತಾಗಿ ಗಾಯವಾಗುವುದು ಈ ಎಲ್ಲಾ ಕಾರಣಗಳಿಂದ ಬಾಯಿಯಲ್ಲಿ ಕ್ಯಾನ್ಸರ್ ಹುಣ್ಣು ಆಗುತ್ತದೆ. ಕ್ಯಾನ್ಸರ್ ನಿಂದಾಗುವ ಹುಣ್ಣು ಸಣ್ಣ ಗಾಯ ಅಥವಾ ಗುಳ್ಳೆಯಂತೆ ಆರಂಭವಾಗಿ ನಿದಾನವಾಗಿ ದೊಡ್ಡದಾಗುತ್ತದೆ . ಕ್ಯಾನ್ಸರ್ ಹುಣ್ಣು .ಒತ್ತಿ ನೋಡಲು ಗಟ್ಟಿಯಾಗಿರುತ್ತದೆ ಹಾಗೂ ನೋವು ಇರುವುದಿಲ್ಲ ಕ್ಯಾನ್ಸರ್ ಹುಣ್ಣು ಹೌದು ಎಂಬುದನ್ನು ಈ ಗಾಯದ ಸಣ್ಣ ತುಂಡೊಂದನ್ನು ತೆಗೆದು ಪರಿಕ್ಷಿಸುವುದರ ( ) ಮೂಲಕ ಖಚಿತಪಡಿಸಿಕೊಳ್ಳಬಹುದು. ಕ್ಯಾನ್ಸರ್ ಹುಣ್ಣಾದರೆ ಅದನ್ನು ಶಸ್ತ್ರಚಿಕಿತ್ಸೆಯ ಮೂಲಕ ಕತ್ತರಿಸಿತೆಗೆದು ನಂತರ ಅಲ್ಲಿಗೆ ರೇಡಿಯೋತೆರಪಿ ಎಂಬ ಚಿಕಿತ್ಸೆ ಕೊಡಬೇಕಾಗುತ್ತದೆ.

ಇನ್ನು ಕೆಲವೊಮ್ಮೆ ಅಪರೂಪದಲ್ಲಿ ದೇಹದ ರೋಗನಿರೋಧಕ ಶಕ್ತಿಯು ವಿಚಿತ್ರವಾಗಿ ವರ್ತಿಸಿ ತನ್ನ ದೇಹದ ಜೀವಕೋಶಗಳನ್ನೇ ಹಾನಿಮಾಡುವುದುಂಟು ಇದನ್ನು ಇಮ್ಯೂನ್ ಕಾಂಪ್ಲೆಕ್ಸ್ ಖಾಯಿಲೆ ಎಂದು ಕರೆಯುತ್ತಾರೆ. ಈ ಖಾಯಿಲೆಯಲ್ಲೂ ಬಾಯಿಯಲ್ಲಿ ಹುಣ್ಣುಗಳಾಗುತ್ತದಾದರೂ ಅದರೊಂದಿಗೆ ದೇಹದ ಇತರ ಭಾಗಗಳಲ್ಲೂ ಬೇರೆ ಚಿಹ್ನೆಗಳಿರುತ್ತದೆ ಈ ಖಾಯಿಲೆಯನ್ನು ವಿವಿಧ ಪರೀಕ್ಷೆಗಳ ಮೂಲಕ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ಮಾಡಬೇಕು.

ಇನ್ನು ಅನೇಕ ಮೀಣೆ ಜೀವಿಗಳಿಂದಲೂ ಬಾಯಿಯಲ್ಲಿ ಹುಣ್ಣಾಗುತ್ತದೆ. ಅನೇಕ ವೈರಸ್ , ಫಂಗಸ್ ಸಿಫಿಲಿಸ್, ಟ್ಯುಬರ್ ಕ್ಯುಲೋಸಿಸ್ ಇತ್ಯಾದಿ ಮೀಣೆಜೀವಿಗಳು ಮುಖ್ಯವಾಗಿ ಸಿಹಿಮೂತ್ರ ರೋಗಿಗಳು ,ವೃದ್ಧರು, ರೋಗನಿರೋಧಕ ಶಕ್ತಿ ಕಡಿಮೆ ಇರುವವರಲ್ಲಿ ಹುಣ್ಣುಗಳನ್ನು ಉಂಟುಮಾಡುತ್ತವೆ. ಈ ಕಾರಣದಿಂದ ಹುಣ್ಣಾಗಿರುವುದನ್ನು ಕೆಲವು ವಿಶೇಷ ಪರೀಕ್ಷೆಗಳ ಮೂಲಕ ಪತ್ತೆ ಹಚ್ಚಿ ಚಿಕಿತ್ಸೆ ಮಾಡಬೇಕು.

ಪದೇ ಪದೇ ಬಾಯಿಯಲ್ಲಿ ಹುಣ್ಣುಗಳಾಗುತ್ತಿರುವವರು ಮೇಲೆ ತಿಳಿಸಿದ ಕಾರಣಗಳೇನಾದರು ಇವೆಯೇ ಎಂದು ಪರಾಮರ್ಶಿಸಿಕೊಳ್ಳಿರಿ. ಏನೂ ಕಾರಣಗಳು ಕಾಣದಿದ್ದರೆ ಬಾಯಿಯ ಸ್ವಚ್ಛತೆಗೆ ವಿಶೇಷ ಗಮನ ಕೊಟ್ಟು ಪೌಷ್ಠಿಕ ಆಹಾರದೊಂದಿಗೆ ಆವಾಗಾವಾಗ ವಿಟಮಿನ್ ಗುಳಿಗೆಯನ್ನು ಸೇವಿಸುತ್ತಿರಬಹುದು.

ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322

## ಕನ್ಯಾ ಮಾಸದ ವಿಶೇಷ ದಿನಗಳು

| | |
|---|---|
| 18-09-2012 | ಗೌರಿತೃತೀಯ |
| 19-09-2012 | ಗಣೇಶ ಚತುರ್ಥಿ |
| 26-09-2012 | ಏಕಾದಶಿ |
| 29-09-2012 | ಅನಂತ ಚತುರ್ದಶಿ |
| 30-09-2012 | ಹುಣ್ಣಿಮೆ |
| 03-10-2012 | ಸಂಕಷ್ಟಹರ ಚೌತಿ |
| 11-10-2012 | ಏಕಾದಶಿ |
| 15-10-2012 | ಮಹಾಲಯ ಅಮಾವಾಸ್ಯೆ |
| 16-10-2012 | ತುಲಾ ಸಂಕ್ರಮಣ |

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

ವಿದ್ಯಾರ್ಥಿ ವೇತನ ವೇದಿಕೆ

### ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್., ಬಿ.ಎಡ್., ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.2,00,000/-ಕ್ಕೆ ಮೀರದ (ಅರ್ಜಿ ಸಲ್ಲಿಸುವಾಗ ಈ ವಿಚಾರವನ್ನು ಅಭ್ಯರ್ಥಿಗಳು ದಯವಿಟ್ಟು ಗಮನಿಸಬೇಕು) ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಯ ಜೊತೆಯಲ್ಲಿ ಹಿಂದಿನ ತರಗತಿಯ ಅಂಕಪತ್ರ ಹಾಗೂ ಪ್ರಸಕ್ತ ಕಲಿಯುತ್ತಿರುವ ಶಾಲೆಯ ಮುಖ್ಯಸ್ಥರ ಪ್ರಮಾಣಪತ್ರವನ್ನು ಒದಗಿಸಬೇಕು. ಅರ್ಜಿ ಫಾರಂಗಳು ಶ್ರೀಶಾರದಾ ಮಂಟಪದ ಕಛೇರಿಯಲ್ಲಿ ಲಭ್ಯವಿದೆ. ಅರ್ಜಿ ಫಾರಂಗಳನ್ನು ತುಂಬಿಸಿ ಸಂಬಂಧಪಟ್ಟ ದಾಖಲೆಗಳೊಂದಿಗೆ ತಾ.30-9-2012ರ ಒಳಗೆ ಸಂಘದ ಕಛೇರಿಗೆ ಕಳುಹಿಸುವುದು.

ವಿದ್ಯಾರ್ಥಿವೇತನ ಪಡೆದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ಮೊಬಲಗನ್ನು ಎಂ.ಓ./ ಮೂಲಕ ಕಳುಹಿಸಲಾಗುವುದು.

**ವಿದ್ಯಾರ್ಥಿವೇತನ ಹಣ ಪಡೆಯಲು ಮಾಹಿತಿ**

ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸಿದವರ ಹಣ ಮಂಜೂರಾದರೆ ಹಣವನ್ನು ಬ್ಯಾಂಕ್ ಮೂಲಕ ಕಳುಹಿಸಲಾಗುತ್ತದೆ. ಇದಕ್ಕೆ ಪೂರಕವಾಗಿ ವಿದ್ಯಾರ್ಥಿಗಳ/ಪೋಷಕರ ಬ್ಯಾಂಕ್ ಅಕೌಂಟ್ (ಸದ್ಯ ಇಲ್ಲವಾದರೆ ಈಗ ಮಾಡಿಸಿರಿ) ವಿವರಗಳನ್ನು ತಿಳಿಸಿರಿ.

1. ಬ್ಯಾಂಕ್ ಖಾತೆಯ ಹೆಸರು, ವಿಳಾಸ.
2. ಖಾತೆಯ ವಿವರ (ಎಸ್.ಬಿ. ಇತ್ಯಾದಿ) ಹಾಗೂ ಪೂರ್ಣ ನಂಬರ್.
3. ಬ್ಯಾಂಕಿನ ಕೋಡ್ ನಂಬರ್. ಇದು ಪಾಸ್ ಪುಸ್ತಕ/ಚೆಕ್‌ನಲ್ಲಿ ಬರೆದಿರುತ್ತಾರೆ. ಇಲ್ಲವಾದರೆ ಬ್ಯಾಂಕ್ ಶಾಖೆಯವರು ಬರೆದುಕೊಡುತ್ತಾರೆ. (ಪಾಸ್ ಪುಸ್ತಕದಲ್ಲಿ)

**(ಮೇಲಿನ ಮೂರು ವಿವರಗಳನ್ನು ಒಳಗೊಂಡ ಖಾತೆಯ ಪಾಸ್‌ಪುಸ್ತಕದ ಪುಟದ ಜೆರಾಕ್ಸ್ ಪ್ರತಿ ಕಳುಹಿಸಿರಿ)**

ಈ ವಿವರಗಳನ್ನು ಸಂಗ್ರಹಿಸಿ ವಿದ್ಯಾರ್ಥಿ ವೇತನ ಮಂಜೂರಾದಾಗ ನೇರ ಬ್ಯಾಂಕ್ ಖಾತೆಗೆ ಹಣವನ್ನು ಜಮೆ ಮಾಡಲು ಪ್ರಯತ್ನಿಸಲಾಗುವುದು.

**- ಅಧ್ಯಕ್ಷರು, ವಿದ್ಯಾರ್ಥಿವೇತನ ವೇದಿಕೆ, ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 101.**

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

### ಉದಯಚಂದ್ರ ಪ್ರತಿಭಾ ಪುರಸ್ಕಾರ 2010-11

ಸಂಘದ ಯುವವೇದಿಕೆಯ ಆಶ್ರಯದಲ್ಲಿ ನಮ್ಮ ಸಮಾಜದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಉದಯಚಂದ್ರ ಸ್ಮಾರಕ ಪುರಸ್ಕಾರ ನೀಡಿ ಪುರಸ್ಕರಿಸಲು ನಿಶ್ಚಯಿಸಲಾಗಿದೆ. 2010-11ನೇ ಸಾಲಿನ ಎಸ್.ಎಸ್.ಎಲ್.ಸಿ., ಪದವಿಪೂರ್ವ (ಮೂರು ವಿಭಾಗ) ತರಗತಿಗಳ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ ಮತ್ತು ಪದವಿ, ಸ್ನಾತಕೋತ್ತರ, ವೈದ್ಯಕೀಯ, ಕಾನೂನು, ಇಂಜಿನಿಯರಿಂಗ್‌ಗಳಲ್ಲಿ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು. ಆದ್ದರಿಂದ ಶೇಕಡಾ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು 30-09-2012ರ ಒಳಗೆ ಅಂಕಪಟ್ಟಿಯ ಪ್ರತಿ ಮತ್ತು ಇತರ ಮಾಹಿತಿಯೊಂದಿಗೆ ಅರ್ಜಿ ಕಳುಹಿಸಿ ಕೊಡಬೇಕು. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿಯೂ 80%*ಕ್ಕಿಂತ ಹೆಚ್ಚು ಅಂಕಗಳಿಸಿದವರು ಮಾತ್ರ ಅರ್ಜಿ ಕಳುಹಿಸುವುದು. ಪದವಿ ಮತ್ತು ಇತರ ವಿಭಾಗಗಳಲ್ಲಿ ರ‍್ಯಾಂಕ್‌ಗಳಿಸಿದ ಬಗ್ಗೆ ಅಧಿಕೃತ ದಾಖಲೆಗಳನ್ನು ಕಳುಹಿಸಬೇಕು.

ಅರ್ಜಿಯನ್ನು ''ಸಂಚಾಲಕರು, ಯುವವೇದಿಕೆ, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು ಉಡುಪಿ - 576 102'' ಇಲ್ಲಿಗೆ ಕಳುಹಿಸಬೇಕು. **ಅರ್ಜಿಯಲ್ಲಿ ಅವಶ್ಯವಾಗಿ ತಮ್ಮ ದೂರವಾಣಿ ಸಂಖ್ಯೆಯನ್ನು ನಮೂದಿಸಬೇಕು.** ವಿಜಯದಶಮಿಯಂದು ಸಂಜೆ ಪ್ರತಿಭಾ ಪುರಸ್ಕಾರ ವಿತರಿಸಲಾಗುವುದು.

**- ಸಂಚಾಲಕರು, ಯುವವೇದಿಕೆ.**

★(ಎಸ್‌ಎಸ್‌ಎಲ್‌ಸಿ. ಹಾಗೂ ಪಿಯುಸಿ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದ ಒಬ್ಬೊಬ್ಬರಿಗೆ ಮಾತ್ರ ಪುರಸ್ಕಾರ ನೀಡಲಾಗುವುದು. ಪದವಿ ಹಾಗೂ ಇತರ ವಿಭಾಗಗಳಲ್ಲಿ ರ‍್ಯಾಂಕ್ ವಿಜೇತರಿಗೆ ಮಾತ್ರ ಪುರಸ್ಕಾರವಿದೆ.)

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

### ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ

ಉಡುಪಿ/ದ.ಕ. ಜಿಲ್ಲೆಯ ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ (ಯಾವುದೇ ವಿಷಯದಲ್ಲಿ) ರ‍್ಯಾಂಕ್‌ಗಳಿಸಿದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ಅರ್ಹ ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ‍್ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರದೊಂದಿಗೆ ತಾ.30-09-2012ರ ಒಳಗೆ ಸ್ಥಾನಿಕ ಬ್ರಾಹ್ಮಣ ಸಂಘ ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

**-ಕಾರ್ಯದರ್ಶಿ**

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

| | |
|---|---|
| ಮಂಗಳಾರತಿ : | ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ |
| ಪ್ರತಿ ಸೋಮವಾರ: | **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ |
| ಪ್ರತಿ ಮಂಗಳವಾರ: | **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಶುಕ್ರವಾರ : | **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಆದಿತ್ಯವಾರ : | ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ |

**ಸಂಕಷ್ಟಹರ ಚತುರ್ಥಿಯಂದು (ತಾ.03-10-2012) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.05-10-2012 ಬಹುಳ ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.22-09-2012 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

### ಡಾ। ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಡಾ। ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟಿನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. 2012-2013ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು. ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ತಮ್ಮ ಹೆಸರು, ರಕ್ಷಕರ ಹೆಸರು, ಪರೀಕ್ಷೆಯ ಅಂಕಪಟ್ಟಿ ಹಾಗೂ ವಿದ್ಯಾಭ್ಯಾಸ ಮಾಡುವ/ಮುಂದುವರಿಸುವ ಬಗ್ಗೆ ದಾಖಲೆಯೊಂದಿಗೆ (ವ್ಯಾಸಂಗ ಪ್ರಮಾಣ ಪತ್ರ) ಈ ಕೆಳಗಿನ ವಿಳಾಸಕ್ಕೆ ತಾ.30-09-2012ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಮಂಟಪ ಅಥವಾ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ವಿಚಾರಿಸಬಹುದು.**

**ಸಂಚಾಲಕರು,** ವಿದ್ಯಾರ್ಥಿ ವೇತನ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),
ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿ - 576 102. ಫೋನ್ : 0820-2520754

**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)